ವಿ. ಕೃ. ಗೋಕಾಕ್

ಹಂಪ. ನಾಗರಾಜಯ್ಯ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ವಿ. ಕೃ. ಗೋಕಾಕ್

ಹಂಪ. ನಾಗರಾಜಯ್ಯ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

V. K. GOKAK by Sri H. P. Nagarajaiah,
Published by Prasaranga, Bangalore
University, Bangalore. pp. 66+viii

ಪ್ರಕಾಶಕ :
ಕೆ. ಸಿ. ಶಿವಪ್ಪ
ಕಾರ್ಯನಿರ್ವಾಹಕ ನಿರ್ದೇಶಕ, ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056

ಪ್ರಕಟಣ ಸಹಾಯಕ :
ಪುಂಡಲೀಕ ಹಾಲಂಬಿ

ಬೆಲೆ : **50 ಪೈಸೆ**

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ–ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು ಅವಶ್ಯಕ. ಪಾಠ ಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ, ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ಹಲವಾರು ವರ್ಷಗಳಿಂದ ನಗರದ ನಾನಾ ಸಂಘ ಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ, ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ

ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

'ವಿ. ಕೃ. ಗೋಕಾಕ್' ಶ್ರೀ ಹಂಪ ನಾಗರಾಜಯ್ಯ ಅವರು ಪ್ರಸಾರಾಂಗ 1984ರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ 'ಕವಿ ಕಾವ್ಯ ಚಿಂತನ' ಉಪನ್ಯಾಸ ಮಾಲೆಯಲ್ಲಿ ನಿಡಿದ ಉಪನ್ಯಾಸದ ಕೃತಿ. ಲೇಖಕರು ಈ ಹಸ್ತಪ್ರತಿಯನ್ನು ನಮಗಿತ್ತು ಸಹಕರಿಸಿದ್ದಾರೆ. ಅವರ ಈ ನೆರವು, ಸಹಕಾರಕ್ಕಾಗಿ ನನ್ನ ವಂದನೆಗಳು.

ಡಿ. ಶಂಕರನಾರಾಯಣ
ಉಪಕುಲಪತಿ

ಪ್ರಕಾಶಕರ ಮಾತು

ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪ್ರತಿವರ್ಷ ತನ್ನ ಪ್ರಚಾರೋಪನ್ಯಾಸ ಮಾಲೆಯಲ್ಲಿ ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಹಮ್ಮಿ ಕೊಂಡು ಜನಪ್ರಿಯತೆಯನ್ನು ಸಾಧಿಸಿರುವುದು ಸಾಮಾನ್ಯ ಸಂಗತಿಯಾಗಿದೆ. ಇದುವರೆಗೂ 'ದುಡಿಯುವ ಜನತೆಗೆ ಮೌಲ್ಯ ಪ್ರಸಾರ', 'ಸಂಗೀತ ಸೌರಭ', 'ಸಂಗೀತ ರಸಗ್ರಹಣ' ಹೀಗೆ ವಿವಿಧ ಉಪನ್ಯಾಸ ಮಾಲೆ ಗಳನ್ನು ನಾಡಿನ ಅನೇಕ ಕಡೆಗಳಲ್ಲಿ, ಅನೇಕ ಸಂಘ ಸಂಸ್ಥೆಗಳ ಸಹಕಾರದೊಡನೆ ಏರ್ಪಡಿಸಲಾಗಿತ್ತು. ಈ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳಿಗೆ ಜನಸಾಮಾನ್ಯರು ಸ್ಪಂದಿಸಿ, ತಮ್ಮ ಸ್ವಾಗತ ಹಾಗೂ ಹರ್ಷವನ್ನು ಒಟ್ಟೊಟ್ಟಿಗೇ ತೋರಿಸಿರುವ ನೆನಪುಗಳು ಇನ್ನೂ ಹಸಿರಾಗಿಯೇ ಇವೆ.

ಸಾಹಿತ್ಯ, ಸಂಸ್ಕೃತಿ, ಸಂಗೀತ ಕವಿ-ಕಾವ್ಯಗಳಲ್ಲಿನ ಉತ್ತಮ ಮೌಲ್ಯಗಳನ್ನು ಜನಸಾಮಾನ್ಯರ ನಡುವೆ ಸಮೃದ್ಧವಾಗಿ ಬಿತ್ತುವ ಕ್ರಿಯೆ ಇಂದು ಹೆಚ್ಚು ಆಗ ಬೇಕಾಗಿದೆ. ಈ ದಿಸೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದೊಡನೆ 'ಕವಿ ಕಾವ್ಯ ಚಿಂತನ' ಪ್ರಚಾರೋಪನ್ಯಾಸ ಮಾಲೆಯೊಂದನ್ನು ರೂಪಿಸಿ 'ಉಪನ್ಯಾಸ ಹಾಗೂ ಗೀತಗಾಯನ' ಕಾರ್ಯಕ್ರಮವನ್ನು 1984 ರ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಿತ್ತು.

"ವಿ. ಕೃ. ಗೋಕಾಕ್" ಕನಕಪುರದಲ್ಲಿ ಶ್ರೀ ಹಂಪ ನಾಗರಾಜಯ್ಯ ಅವರು ನೀಡಿದ ಉಪನ್ಯಾಸದ ಕೃತಿ. ಈ ಉಪನ್ಯಾಸ ನೀಡಬೇಕಾಗಿದ್ದ ಶ್ರೀ ಸು. ರಂ. ಎಕ್ಕುಂಡಿ ಅವರು ಅಸ್ತವ್ಯಸ್ತರಾಗಿದ್ದರಿಂದ, ಉಪನ್ಯಾಸ ನೀಡಲು ಸಾಧ್ಯವಾಗದೇ ಇರುವಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಶ್ರೀ ಹಂಪನಾ ಅವರು ಉಪನ್ಯಾಸ ವನ್ನು ನೀಡಿ ಕಾರ್ಯಕ್ರಮದ ಯಶಸ್ಸಿಗೆ ಕಾರಣ ವಾಗಿದ್ದಾರೆ. ಅವರಿಗೆ ವಿಶ್ವವಿದ್ಯಾಲಯದ ಪರವಾಗಿ ನಾನು ತುಂಬ ಆಭಾರಿ.

ಕೆ. ಸಿ. ಶಿವಪ್ಪ
ಕಾರ್ಯನಿರ್ವಾಹಕ ನಿರ್ದೇಶಕ
ಪ್ರಸಾರಾಂಗ

ನನ್ನ ನುಡಿ

ನಾನು ಬಾಲ್ಯದಿಂದ ಓದಿ ಮೆಚ್ಚಿಕೊಂಡಿರುವ ಕೆಲವು ಲೇಖಕರಲ್ಲಿ ಡಾ. ವಿ. ಕೃ. ಗೋಕಾಕರೂ ಒಬ್ಬರು. ಅವರು ನನಗೆ ವ್ಯಕ್ತಿಯಾಗಿ ನಿಕಟ ಪರಿಚಯ ಆಗುವುದಕ್ಕೂ ಇಪ್ಪತ್ತು ವರ್ಷ ಮೊದಲೇ ಅವರ ಕೃತಿಗಳ ಪರಿಚಯವಾಗಿತ್ತು. ಬೆಂಗಳೂರಿಗೆ ಬಂದ ಮೇಲೆ ನಮ್ಮ ಸ್ನೇಹ ವರ್ಧಿಸಿತು. ಪದೇ ಪದೇ ಅವರನ್ನು ಕಾಣುವುದು ಸಾಧ್ಯವಾದದ್ದು ಡಾ. ಆ. ನೇ. ಉಪಾಧ್ಯೆ ಹಾಗೂ ನ್ಯಾಯಮೂರ್ತಿ ತ. ಕು. ತುಕೋಲರಿಂದ. ವಿನಾಯಕರು ನನಗಿಂತ 27 ವರ್ಷ ಹಿರಿಯರು, ವಯಸ್ಸಿನಲ್ಲಿ. ಆದರೆ ಈ ಅಂತರವನ್ನು ಕತ್ತರಿಸಿ ಆತ್ಮೀಯತೆ ಕುಡಿಯಿಟ್ಟಿದ್ದು ಅವರಲ್ಲಿರುವ ಅವ್ಯಾಜ ಅಂತಃಕರಣದಿಂದ. ಎಲ್ಲರೊಡನೆ ಸರಳರಾಗಿ ಸುಲಭರಾಗಿ ಬೆರೆಯುವ ಬೆಸೆದುಕೊಳ್ಳುವ ಸ್ವಭಾವ ಅವರದು. ವಿನಾಯಕ ದಂಪತಿಗಳು ಹಂಪನಾ ದಂಪತಿಗಳಿಗೆ ಕಳೆದ ಹದಿನಾರು ವರ್ಷಗಳಿಂದ ತೋರುತ್ತಾ ಬಂದಿರುವ ವಾತ್ಸಲ್ಯವನ್ನು ಇಲ್ಲಿ ಕೃತಜ್ಞತೆಯಿಂದ ನೆನೆಯುವುದಕ್ಕೆ ಹರ್ಷವೆನಿಸುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ 1978ರಲ್ಲಿ ನನ್ನ ಹೆಸರನ್ನು ಸೂಚಿಸಿದ ಅಗವ್ಯರಲ್ಲಿ ವಿನಾಯಕರೂ ಒಬ್ಬರು.

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತು 21–11–84 ರಿಂದ 30–11–84ರ

ವರೆಗೆ ಹತ್ತು ದಿನಗಳ ಕಾಲ 'ಕವಿ ಕಾವ್ಯ ಚಿಂತನ' ಎಂಬ ವಿಶಿಷ್ಟ ಉಪನ್ಯಾಸ ಮಾಲೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ಏರ್ಪಾಟು ಮಾಡಿತ್ತು. ಈ ಮಾಲೆಯಲ್ಲಿ 28-11-84 ರಂದು ಬುಧವಾರ ಸಂಜೆ ಬೆಂಗಳೂರು ಜಿಲ್ಲೆಯ ಕನಕಪುರದಲ್ಲಿ (ಕಾನಕಾನಹಳ್ಳಿ) ಡಾ. ವಿ. ಕೃ. ಗೋಕಾಕರ ಕೃತಿಗಳನ್ನು ಕುರಿತು ಮಾತನಾಡಲು ಒಪ್ಪಿಕೊಂಡಿದ್ದ ಪ್ರಸಿದ್ಧ ಕವಿ ಸು. ರಂ. ಎಕ್ಕುಂಡಿಯವರು, ಕಡೇ ಗಳಿಗೆಯಲ್ಲಿ ಒದಗಿದ ತೊಂದರೆಯಿಂದಾಗಿ ಬರಲಾಗಲಿಲ್ಲ. ಗೆಳೆಯ ಕೆ. ಸಿ. ಶಿವಪ್ಪನವರು ಮತ್ತು ಪುಂಡಲೀಕ ಹಾಲಂಬಿಯವರು ನನಗೆ ಈ ಕಾರ್ಯವನ್ನು ನಿರ್ವಹಿಸುವ ಹೊಣೆಗಾರಿಕೆಯನ್ನು ವಿಶ್ವಾಸದಿಂದ ವಹಿಸಿದರು. ಅಂದು ನಾನು, ಕೇವಲ ಒಂದೆರಡು ದಿನಗಳ ಕ್ಲುಪ್ತ ಕಾಲಾವಧಿಯಲ್ಲಿ ಸಿದ್ಧತೆ ಮಾಡಿಕೊಂಡು ಮಾತನಾಡಿದೆ. ಭಾಷಣಕ್ಕೆ ನಿರೀಕ್ಷೆಗೂ ಮೀರಿದ ಉತ್ತಮ ಪ್ರತಿಕ್ರಿಯೆ ಬಂತು; ಕನಕಪುರ ರೂರಲ್ ಕಾಲೇಜಿನ ಅಧ್ಯಾಪಕವೃಂದ, ವಿದ್ಯಾರ್ಥಿ ಸಮುದಾಯ 'ತುಂಬ ಚೆನ್ನಾಗಿತ್ತು' ಎಂಬ ಅರ್ಹತಾ ಪತ್ರ ಕೊಟ್ಟರು. ಶಿವಪ್ಪನವರು 'ನಮ್ಮ ಮರ್ಯಾದೆ ಉಳಿಸಿದಿರಿ, ನಿಮ್ಮಲ್ಲಿ ಇಟ್ಟಿದ್ದ ಭರವಸೆಯನ್ನೂ ಉಳಿಸಿಕೊಂಡಿರಿ, ಇದನ್ನೇ ಒಂದು ಪುಟ್ಟ ಪುಸ್ತಕವಾಗಿ ಬರೆದುಕೊಡಿ' ಎಂದು ಬೆನ್ನುತಟ್ಟಿ ಒತ್ತಾಯಿಸಿದರು. ಸ್ನೇಹ ತುಂಬಿದ ಆ ಮುಲಾಜಿಗೆ 'ಇಲ್ಲ' ಎನ್ನಲು ಆಗಲಿಲ್ಲ. ಫಲವಾಗಿ ಈಗ ಇಗೋ ಈ ಪುಸ್ತಕ ನಿಮ್ಮ ಕೈಯಲ್ಲಿದೆ. ಇಲ್ಲಿ ಪರಿಚಯವೇ ಪ್ರಧಾನ, ವಿಮರ್ಶೆ ಆನುಷಂಗಿಕ.

ಹಂಪ ನಾಗರಾಜಯ್ಯ

ಬದುಕು ಬಂದ ಬಗೆ

ಕರ್ನಾಟಕವನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿದ ಡಾ. ವಿನಾಯಕ ಕೃಷ್ಣ ಗೋಕಾಕರು ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳಲ್ಲೊಬ್ಬರು. ವಿನಾಯಕ ಎಂಬುದು ಅವರ ಕಾವ್ಯನಾಮ, ಸಂಕ್ಷಿಪ್ತ ಹೆಸರು. ದೊಡ್ಡ ಬದುಕು ಬಾಳಿದವರು, ಉತ್ಕೃಷ್ಟ ಬರವಣಿಗೆ ಮಾಡಿದವರು. ಕನ್ನಡದಲ್ಲಿ ಇಂಗ್ಲಿಷಿನಲ್ಲಿ ಸಮನಾದ ಉತ್ತಮ ಸಾಹಿತ್ಯ ರಚಿಸಿದ ಸವ್ಯಸಾಚಿ. ಸಾಹಿತ್ಯವೇ ಅಲ್ಲದೆ ಶಿಕ್ಷಣ–ಸಂಸ್ಕೃತಿ ಕ್ಷೇತ್ರಗಳಲ್ಲೂ ಅವರ ಸಾಧನೆ ಸಿದ್ಧಿ ದೊಡ್ಡದಿದೆ. ಬಹುಮುಖ ವ್ಯಕ್ತಿತ್ವದ ಕೆಲವು ಪೈಲುಗಳನ್ನು ಪರಿಚಯಿಸಿಕೊಟ್ಟರೂ ಸಾಕು, ಅವರ ಉನ್ನತ ವ್ಯಕ್ತಿತ್ವದ ಹಿರಿಮೆ ಮನವರಿಕೆಯಾಗುತ್ತದೆ.

ವಿನಾಯಕರು ಆರಡಿ ಅಜಾನುಬಾಹು. ಎತ್ತರದ ವ್ಯಕ್ತಿ, ವ್ಯಕ್ತಿತ್ವ, ಸದೃಢಕಾಯಂ. ಚುರುಕುಗಣ್ಣಿನ ಮುಖ ನಗೆಯ ಬೊಗಸೆ. ಕನ್ನಡಕದೊಳಗಿಂದ ಪ್ರೀತಿ ತುಳುಕುವ ಆತ್ಮೀಯ ನೋಟ. ಬ್ರಹ್ಮ ಬಹಳ ಬರೆಯಲು ತೆರಪಾಗಿರುವ ಅಗಲವಾದ ಹಣೆ. ಧ್ವನಿ ಮಂಡಲ ಕಡಲ ಮೊರೆತ–ದುಂದುಭಿ ಗಂಭೀರ ನಿನದಂ ; ಸಮುದ್ರಗೀತ ಹಾಡಲು. ಅವರು ಒಂದೆಡೆ ತಮ್ಮನ್ನು ತಾವು ತೋಡಿಕೊಂಡ ಭಾವಲಹರಿ :

ಮರಣ ಶಯ್ಯೆಯಲಿರಲು ಪ್ರಾಣದಾನವನಿತ್ತೆ
ಉಳಿಸಿರುವ ಹರಣವನು ಬಳಸಿ ನೋಡು :
ನಿನ್ನಾರತಿಗೆ ದೀಪ, ನಿನ್ನ ಕೊರಳಿಗೆ ಹೂವು
ನಿನ್ನ ಕಿವಿಗಿಂಪು ಸೊಂಪಾದ ಹಾಡು.

ನನ್ನನಾಡಿನ ಸೇವೆಗೆನ್ನನುಳಿಸೆಂದೊರೆಯೆ
'ಹೋಗು ಕನ್ನಡ ನಾಡ ಸೇವಿಸೆಂ'ದೆ
'ನನ್ನನೇ ನಂಬಿರುವ ನನ್ನಿಗರ ಕಾಂಬೆನೆನೆ'
'ಹೋಗು–ಬಾಳವರೊಡನೆ ಧಾವಿಸೆಂ' ದೆ !

ಚೆಲುವ ಕನ್ನಡ ನಾಡಿಗೊಂದು ಮಲ್ಲಿಗೆ ಹೂವ
ತರಲೆಂದು ತೆರಳಿದ್ದ ತರಳ ನಾನು
ನಿನ್ನ ವರದಾನಕ್ಕೆ ಸರಿಯಾವುದೈ ದೊರೆಯೆ ?
ಜೀವಸುಮವನೆ ನಿನಗೆ ಸಲ್ಲಿಸುವೆನು
(ಸಮುದ್ರ ಗೀತೆಗಳು ; ಆತ್ಮವೃತ್ತದಲ್ಲಿ ಕಡೆಯ ಅರ್ಪಣ)

ಸರ್ವಸಮರ್ಪಣ ಭಾವದ ಕವಿಯ ಈ ಮಾತುಗಳು, ಒಟ್ಟಾರೆ ಅವರ ಚಿತ್ತ ಪ್ರವೃತ್ತಿಯನ್ನೇ ಅಲ್ಲದೆ, ಕಾವ್ಯಧೋರಣೆಯ ಧ್ವನಿಯನ್ನೂ ಒಳಗೊಂಡಿದೆ. ಮಾಧ್ವ ಸಿದ್ಧಾಂತದ ಪರಿಸರದಲ್ಲಿ ಬೆಳೆದರು, ಅರವಿಂದರ ತಾತ್ವಿಕ ಚಿಂತನೆಯನ್ನು ಮೈಗೂಡಿಸಿಕೊಂಡರು, ಸತ್ಯ ಸಾಯಿಯ ಧರ್ಮ ಜಿಜ್ಞಾಸೆಯ ಸಾರವತ್ತಾದ ಆಲೋಚನೆಗಳನ್ನು ಅಳವಡಿಸಿಕೊಂಡರು, ಜತೆಗೆ ಪಶ್ಚಿಮದ ವಿಚಾರಧಾರೆಯನ್ನೂ ಪುರಸ್ಕರಿಸಿದರು. ಇದು ಸಮನ್ವಯ ಸಾಧನೆ. ಸಮನ್ವಯ (ಅವರು ಸಂಪಾದಕರಾಗಿದ್ದ ಪತ್ರಿಕೆಯ ಹೆಸರು) ಮತ್ತು ಸಾಮರಸ್ಯ (ಸಮರಸವೇ ಜೀವನ–ಅವರ ಮಹಾ ಕಾದಂಬರಿಯ ಹೆಸರು) ಅವರ ಜೀವನ ಸಿದ್ಧಾಂತದ ಸಾರ, ಉಸಿರು. ಸಾಹಿತ್ಯದಲ್ಲೂ ಬದುಕಿನಲ್ಲೂ ಇದೇ ಅವರು ಹಿಡಿದ ಸೂತ್ರ, ಕಂಡ ಸತ್ಯ– ಯಾವ ಅತಿಗಳಿಗೂ ಹಾಯ

ದಿರುವುದು. ಅವರ ವಿಮರ್ಶೆಯಲ್ಲೂ ಇವೇ ಸಮನ್ವಯ ದೃಷ್ಟಿಯನ್ನು ಕಾಣುತ್ತೇವೆ.

ಅವರ ವ್ಯಕ್ತಿತ್ವದ ಪೈಲುಗಳು ರೋಚಕ ಹಾಗೂ ರಂಜಕವಾಗಿರುವಂತೆ ಉದ್ಬೋಧಕವೂ ಆಗಿವೆ. ಕಾವ್ಯಮಯ ವ್ಯಕ್ತಿತ್ವದಂತೆ ಆಡಳಿತಗಾರ ವ್ಯಕ್ತಿತ್ವವೂ ಸ್ವಾರಸ್ಯವಾಗಿದೆ. ಅವರ 75 ವರ್ಷಗಳ ದೀರ್ಘಜೀವನ ನಡೆದುಬಂದ ದಾರಿಯ ಕೆಲವು ಪ್ರಮುಖ ಹೆಜ್ಜೆ ಗುರುತುಗಳನ್ನು ದಾಖಲಿಸುವ ಮೊದಲು, ಸಾಹಿತಿಯ ಮಾತುಗಳಿಂದಲೇ ಆತ್ಮವೃತ್ತ ಅನಾವರಣಗೊಳ್ಳುವುದು ಸೂಕ್ತವೆನಿಸುತ್ತದೆ.

"ನನ್ನ ತಾಯಿಯ ತಂದೆ, ಮೆಟ್ರಿಕ್ ಆಗದೆ ಇದ್ದ ಒಬ್ಬ ಶಾಲಾ ಮಾಸ್ತರರು. ಆದರೆ ಸಜ್ಜನರು, ಭಗವಂತನಲ್ಲಿ ಶ್ರದ್ಧೆಯಿದ್ದವರು–ಸವಣೂರಿನ ಸತ್ಯಬೋಧ ಮಠದಲ್ಲಿಯ ವಾರ್ಷಿಕ ಸಮಾರಾಧನೆಗಳಲ್ಲಿ ಸದ್ದಿಲ್ಲದೆ ತುಪ್ಪ ಬಡಿಸುತ್ತಿರುವ ಕೆಲಸವನ್ನು ವಹಿಸುತ್ತಿದ್ದರು. ಆ ಚಿತ್ರ ಇನ್ನೂ ನನ್ನ ಕಣ್ಣೆದುರಿಗಿದೆ. ನನ್ನ ತಂದೆ ಮೆಟ್ರಿಕ್ ಪಾಸ್ ಆಗದೆ ಇದ್ದರೂ ಸವಣೂರು ಸಂಸ್ಥಾನದಲ್ಲಿ ದೊರೆಯ ಅನುಮತಿ ಪಡೆದು ವಕೀಲಿ ವೃತ್ತಿಯನ್ನು ಅವಲಂಬಿಸಿದ್ದರು. ಜ್ಯೋತಿಷಿಗಳಾಗಿ ಹತ್ತುಹನ್ನೆರಡು ವರ್ಷ ದೇಶಾಟನೆಯಲ್ಲಿ ಕಳೆದು ಕೊನೆಗೆ ವಕೀಲರಾಗಿ ಸವಣೂರಿನಲ್ಲಿ ತಮ್ಮ ಮಾವಂದಿರ ಜೊತೆಗೆ ಕಾಲೂರಿ ನಿಂತರು. ಅವರು ಸದ್ಭಕ್ತರು. ತಮ್ಮ ಗುರುಗಳಾದ ಬಾಳೆಕುಂದ್ರಿಯ ಪಂತ ಮಹಾರಾಜರಲ್ಲಿ ಅಚಲ ಶ್ರದ್ಧೆಯಿದ್ದವರು. ಈ ಬಡ ಮನೆತನದಲ್ಲಿ ನಾನು ಬೆಳೆದುಬಂದೆ. ಆದರೆ ತಾತಂದಿರ ಸಜ್ಜನಿಕೆಯೂ,

ತಂದೆಯ ಶ್ರದ್ಧೆಯೂ ನನಗೆ ಸ್ಫೂರ್ತಿದಾಯಕವಾದವು.

"ಮೆಟ್ರಿಕ್ ಆದಮೇಲೆ ಮುಂದಿನ ಶಿಕ್ಷಣಕ್ಕೆಂದು ನಾನು ಧಾರವಾಡದಲ್ಲಿಯ ಕರ್ನಾಟಕ ಕಾಲೇಜಿಗೆ ಹೋದೆ. ನನ್ನ ದೈವ ಧಾರವಾಡದಲ್ಲಿ ನನಗೆ ಅನೇಕ ಗೆಳೆಯರನ್ನು ಒದಗಿಸಿಕೊಟ್ಟಿತು. ಬೇಂದ್ರೆಯವರ ಸ್ನೇಹ –ಮಾರ್ಗದರ್ಶನವನ್ನೂ ಕರುಣಿಸಿತು. ಕಾಲೇಜಿನ ವಾತಾವರಣದಲ್ಲಿ ಹಲವಾರು ಮಿತ್ರರ ಮತ್ತು ಪ್ರಾಧ್ಯಾಪಕರ ಸಂಪರ್ಕ ಬಂದು, ನನ್ನ ವಿದ್ಯಾರ್ಥಿ ಜೀವನದಲ್ಲಿ ಯಶಸ್ಸನ್ನು ಗಳಿಸಬೇಕೆಂಬ ಬಯಕೆ ಮೊಳೆಯಿತು. ಅದು ಯಶಸ್ವಿಯಾಗಿಯೂ ಪರಿಣಮಿಸಿತು."

ಕರ್ನಾಟಕ ವಿಶ್ವವಿದ್ಯಾಲಯ ಆಗಿನ್ನೂ ಆರಂಭವಾಗಿರಲಿಲ್ಲ. ಕರ್ನಾಟಕ ಕಾಲೇಜು ಮುಂಬಯಿ ವಿಶ್ವವಿದ್ಯಾಲಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು. ವಿನಾಯಕರು 1929ರಲ್ಲಿ ಇಡೀ ಈ ಅವಿಭಕ್ತ ಮುಂಬಯಿ ವಿಶ್ವವಿದ್ಯಾಲಯಕ್ಕೆ ಇಂಗ್ಲಿಷನಲ್ಲಿ ಮೊದಲಿಗರಾಗಿ ತೇರ್ಗಡೆ ಹೊಂದಿದರು. ವಿದ್ಯಾರ್ಥಿವೇತನ ದೊರೆಯಿತು. ಎಂ.ಎ.ಗೆ ಓದಲು ನೆರವಾಯಿತು. ಓದಿನ ದಾರಿ ಸುಗಮವಾಯಿತು. ಎಂ.ಎ. ತರಗತಿಯ ಪ್ರಥಮ ವರ್ಷದಲ್ಲಿದ್ದಾಗಲೇ ಕಾಯಿಲೆಯಿಂದ ಬಳಲುತ್ತಿದ್ದ ತಾಯಿಯ ಒತ್ತಾಸೆಯಿಂದ 1930ರಲ್ಲಿ ಮದುವೆಯ ಒಸಗೆ ನಡೆಯಿತು. 1931ರಲ್ಲಿ ಪ್ರಥಮ ಶ್ರೇಣಿಯಲ್ಲಿ ಎಂ.ಎ. ಪಡೆದದ್ದೂ ಆಯಿತು. ಅದೇ ವರ್ಷ ಪುಣೆಯ ಫರಗ್ಯೂಸನ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ನೇಮಕ. ಟಿ. ಕೆ. ತುಕೋಲರು ಸಹೋದ್ಯೋಗಿ, ಗೆಳೆಯರು ಬೆಳೆದರು. ಸಂಸಾರ

ಹೆಚ್ಚಿತು. ಎರಡು ಮಕ್ಕಳ ತಂದೆಯಾದರು. ಉನ್ನತ ವ್ಯಾಸಂಗಕ್ಕೆಂದು ಲಂಡನ್ನಿಗೆ 1936ರಲ್ಲಿ ಹೊರಟರು. 'ಪಿ. ಅಂಡ್ ಓ' ಎಂಬ ಹಡಗು ಮುಂಬಯಿಯಿಂದ ಇವರನ್ನು ಇಂಗ್ಲೆಂಡಿಗೆ ಕರೆದೊಯ್ಯಿತು. ಭಾರತದಿಂದ ಹೆಂಡತಿಯು ಕಾಯಿಲೆ ವರ್ತಮಾನ ಬಂದು ವಿಚಲಿತ ರಾದರು. ಒಂಬತ್ತು ತಿಂಗಳ ವಿದೇಶ ವಾಸ ಮುಗಿದಿತ್ತು! ಭಾರತಕ್ಕೆ ಬಂದು ತಾಯಿ ಹಾಗೂ ಹೆಂಡತಿಯರ ಗೆಲುವೊಗ ನೋಡಿ ಮತ್ತೆ ಬ್ರಿಟನ್ನಿಗೆ ಹಿಂತಿರುಗಿದರು.

ಲಿಖಿತ ಪರೀಕ್ಷೆ ಮುಗಿಸಿದರು. ಮುಖ ಪರೀಕ್ಷೆ ಸಮಯಕ್ಕೆ ಸರಿಯಾಗಿ ಭೀಕರವಾದ ಕರಳುಬೇನೆ ಕಾಡಿತು. ಶಸ್ತ್ರಕ್ರಿಯೆ ನಡೆಯಿತು. ಜೀವನ–ಮರಣಗಳ ಜೋಕಾಲಿಯಲ್ಲಿ ಜೀಕಾಡಿದ ಗೋಕಾಕರ ಜೀವ ಗಂಡಾಂತರದಿಂದ ಪೂರ್ಣವಾಗಿ ಪಾರಾಯಿತು. 'ದೈವ' ಉಳಿಸಿದ್ದರಿಂದ ಅವರ 'ವೈವಾ' ಪರೀಕ್ಷೆ ಆಸ್ಪತ್ರೆಯಲ್ಲೇ ಏರ್ಪಾಟಾಯಿತು. ಅದರ ಒಂಬತ್ತು ಉತ್ತರ ಪತ್ರಿಕೆಗಳ ಪೈಕಿ ಏಳರಲ್ಲಿ ಮೊದಲಿಗರಾಗಿದ್ದ ವಿನಾಯಕರಿಗೆ ವಿಲಾಯಿತಿ ಜನ ವಿನಾಯಿತಿ ಕೊಟ್ಟರು, ಆದರಿಂದ ಅವರು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆಂದು ಫಲಿತಾಂಶವನ್ನು ಪ್ರಕಟಿಸಲಾಯಿತು. ಗೆಲುವಿನ ಗರಿ ಸಿಕ್ಕಿಕೊಂಡು ಬಂದ ತೇಜಸ್ವಿ ತರುಣನಿಗೆ ತವರುಮನೆಯಲ್ಲಿ ವಿಜಯೋತ್ಸವ ಕಾದಿತ್ತು. ಅವರು ಒಮ್ಮೆಲೇ, 30ರ ಪ್ರಾಯದಲ್ಲಿ ಸಾಂಗಲಿಯ ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕವಾದರು. ನಾಲ್ಕು ವರ್ಷದ ಕಾಲ ಅಲ್ಲಿದ್ದು ರಾಜೀನಾಮೆ ನೀಡಿ ಧಾರವಾಡಕ್ಕೆ ಬಂದರು. ಇಲ್ಲಿಯೂ ನವಮಾಸಗಳ

ನಿರುದ್ಯೋಗ ವನವಾಸ ಮುಗಿದ ಮೇಲೆ ಹೈದರಾಬಾದಿಗೆ ತೆರಳಿದರು, ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲೊಬ್ಬ ಪ್ರಾಧ್ಯಾಪಕರಾಗಿ, ಹದಿನೈದು ತಿಂಗಳು ಕಳೆಯುತ್ತಿದ್ದಂತೆ ಬಡೋದಾ ಸರಕಾರದ ಹೊಸದಾಗಿ ವೀಸ್ ನಗರದಲ್ಲಿ ತೆರೆದ ಕಾಲೇಜಿಗೆ 1946ರಲ್ಲಿ ಪ್ರಿನ್ಸಿಪಾಲರಾಗಿ ಹೋದರು :

ವೀಸನಗರಕ್ಕೆಂದು ಕೈಯ ಬೀಸುತ ಬಂದೆ
ಬಾ ಎಂದು ಕರೆದಿಹುದು ದೈವವಿಲ್ಲಿ.

ಮೂರುವರ್ಷ ದುಡಿದ ಮೇಲೆ ವೀಸ ನಗರದಿಂದ ಕೊಲ್ಲಾಪುರದ ರಾಜಾರಾಮ ಕಾಲೇಜಿಗೆ ವರ್ಗಾವಣೆ. ಗಾಳಿ ತೂರಿದ ಬೀಜದಂತೆ ಮತ್ತೆ ಪಯಣ. ಕೊಲ್ಲಾಪುರದಲ್ಲಿಯೂ ಮೂರು ವರ್ಷದ ವಾಸ. ಡಾ. ಆ. ನೇ. ಉಪಾಧ್ಯೆಯವರ ಸಖ್ಯ–ಸುಖ. ಆಮೇಲೆ ಧಾರವಾಡಕ್ಕೆ ವರ್ಗ. ಕರ್ನಾಟಕ ಕಾಲೇಜಿನ 'ಪ್ರಿನ್ಸಿಪಲ್'. ಧಾರವಾಡದಿಂದ ವಿದ್ಯಾಭ್ಯಾಸ ಆರಂಭವಾಗಿತ್ತು. ಈಗ ಅಲ್ಲಿ ಪ್ರಾಚಾರ್ಯಿಕೆ. ಆರು ವರ್ಷದ ಧಾರವಾಡದ ದಿನಗಳು ಆಳವಾದ ಅನುಭವ ಮೂಡಿಸಿದುವು. 'ಪಿ. ಇ. ಎನ್' ಕಾಂಗ್ರೆಸಿನಲ್ಲಿ ಭಾಗವಹಿಸಲೂ ಜಪಾನಿಗೂ ಹೋಗಿಬಂದರು. ಪುಣೆಯಲ್ಲಿ ಅಂಕುರಿಸಿದ ಲೇಖನ ವ್ಯವಸಾಯ ಇಲ್ಲಿ ಪಲ್ಲವಿಸಿತು, ಫಲಿಸಿತು.

ಮುಂದಿನ ಪಯಣ ಹೈದರಾಬಾದಿಗೆ. ಇದು ಎರಡನೆಯ ಸಲ. ಈ ಬಾರಿ ಇಲ್ಲಿ ನೂತನವಾಗಿ ಆರಂಭವಾದ 'ಸೆಂಟ್ರಲ್ ಇನ್ಸ್ಟಿಟ್ಯೂಟ್ ಆಫ್ ಇಂಗ್ಲಿಷ್'ನ ನಿರ್ದೇಶಕರಾಗಿ. "ಇಲ್ಲಿ ಏಳು ವರ್ಷಗಳ ಕಾಲ ಆ ಸಂಸ್ಥೆಯನ್ನು ಕಟ್ಟುವ ಭಾಗ್ಯ ನನ್ನದಾಯಿತು. ಕಾಶ್ಮೀರ

ದಿಂದ ಕನ್ಯಾಕುಮಾರಿವರೆಗೆ ಎಲ್ಲ ಪ್ರದೇಶಗಳಲ್ಲಿಯ ಆಂಗ್ಲ ಭಾಷಾ ಸಾಹಿತ್ಯಗಳ ಉಪ ಪ್ರಾಧ್ಯಾಪಕರು ಇಲ್ಲಿ ವಿದ್ಯಾರ್ಥಿಗಳಾಗಿ ಬಂದರು. ಇಂತಹ ಸಾವಿರ ಜನರ ಸಹವಾಸ ನನಗೆ ಲಭಿಸಿತು. ಅಲ್ಲದೆ ಆಂಗ್ಲ ಭಾಷಾ ಸಾಹಿತ್ಯಗಳನ್ನು ವಿದ್ಯಾಕ್ರಮದ ವಿವಿಧ ಸ್ತರಗಳಲ್ಲಿ ಕಲಿಸುವ ಹೊಸ ಕ್ರಮಗಳ ಸಂಶೋಧನೆ ಇಲ್ಲಿ ನಡೆ ಯಿತು. ಈ ಸಂಶೋಧನದ ಮೂಲಕ ಅನೇಕ ಸಲ ನನಗೆ ವಿದೇಶಗಳಿಗೆ ಹೋಗುವ ಪ್ರಸಂಗ ಬಂತು. ಎರಡು ಸಲ ಇಂಗ್ಲೆಂಡಿಗೆ ಹಾಗೂ ಒಮ್ಮೆ ಪೂರ್ವದ ಆಫ್ರಿಕಾಕ್ಕೆ ಹೋದೆ. ಬೆಲ್‌ಜಿಯಂ ದೇಶದಲ್ಲಿ ನಡೆದ ಅಂತರರಾಷ್ಟ್ರೀಯ ಕವಿ ಸಮ್ಮೇಳನಕ್ಕೂ ಭಾರತದ ಪ್ರತಿನಿಧಿಯಾಗಿ ಹೋಗಿದ್ದೆ. ಹೀಗೆ ಈ ಸಂಶೋಧನೆ ಯಲ್ಲಿ ಮುಖ್ಯ ಪಾತ್ರವಹಿಸಿ ಅದನ್ನು ದೇಶದಲ್ಲಿ ಎಲ್ಲೆಡೆಗೆ ಘೋಷಿಸುವ ಹೊಣೆಗಾರಿಕೆಯೂ ನನ್ನ ದಾಯಿತು.'' ಅಮೆರಿಕಾ ಇಂಗ್ಲೆಂಡ್ ಜಪಾನ್ ಬೆಲ್‌ಜಿಯಮ್ ಯುಗಾಂಡಾ ಮೊದಲಾದ ದೇಶಗಳಲ್ಲಿ ನಡೆದ ಹಲವು ಅಂತರ ರಾಷ್ಟ್ರೀಯ ಸಮ್ಮೇಲ ಸಂಕೂಟ ಗಳಿಗೆ ಹೋಗಿ ಬಂದರು.

ಇಂಥ ಹೊಣೆಗಾರಿಕೆಯನ್ನು ಹೆಗಲೇರಿಸಿಕೊಂಡು ಸಾಂಸ್ಕೃತಿಕ ಹರಿಕಾರರಾಗಿ ಹೊರಟ ವಿನಾಯಕರು 1966ರ ಅಕ್ಟೋಬರ್ ತಿಂಗಳು ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿಗಳಾಗಿ ಬಂದರು. 1970ರಲ್ಲಿ ಸಿಮ್ಲಾದ "ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್''ನ ನಿರ್ದೇಶಕರಾದರು. 1977ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಆಯ್ಕೆ

ಮಂಡಳಿ ಅಧ್ಯಕ್ಷರಾದರು. 1978ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಉಪಾಧ್ಯಕ್ಷರೂ, 1982 ರಿಂದ ಅಧ್ಯಕ್ಷರೂ ಆಗಿದ್ದಾರೆ. ಇದೀಗ ಪುಟ್ಟಪರ್ತಿಯಲ್ಲಿರುವ ಸತ್ಯಸಾಯಿ ಶಿಕ್ಷಣ ಸಂಸ್ಥೆಗೆ ಸೇರಿದ ಸ್ವೀಕೃತ ವಿಶ್ವ ವಿದ್ಯಾನಿಲಯದ ಕುಲಪತಿಗಳಾಗಿ ಆಡಳಿತ ಕಾರ್ಯ ವನ್ನು 1981ರಿಂದ ನಿರ್ವಹಿಸುತ್ತಾ ಬಂದಿದ್ದಾರೆ.

ಅವರ ಟೊಪ್ಪಿಗೆಯಲ್ಲಿ ಮರ್ಯಾದೆಯ ಹೆಮ್ಮೆಯ ಗರಿಗಳು ಹಲವಾರು. ಕೇಂದ್ರ ಸಾಹಿತ್ಯ ಅಕಾದೆಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ, ಕ್ಯಾಲಿಫೋರ್ನಿಯಾದ ಪೆಸಿಫಿಕ್ ವಿಶ್ವವಿದ್ಯಾನಿಲಯ ದಿಂದ ಗೌರವ ಡಾಕ್ಟರೇಟ್ ಪದವಿ; ನಾಗಪುರ, ಸರ್ದಾರ್ ಪಟೇಲ್, ಕಲ್ಕತ್ತಾ, ಶಿವಾಜಿ ಮೊದಲಾದ ವಿಶ್ವವಿದ್ಯಾಲಯಗಳ ಘಟಿಕೋತ್ಸವ ಭಾಷಣ ಗೌರವ, ಯಾರಿಗೆ ತಾನೆ ಈ ಮನ್ನಣೆಗಳ ಸರಮಾಲೆ ಅಭಿಮಾನ ಉಕ್ಕಿಸುವುದಿಲ್ಲ; ಇದರ ಜತೆಗೆ ಕರ್ನಾಟಕ ಸರಕಾರದ ಕೋರಿಕೆಯ ಮೇರೆಗೆ ಇವರು ಅಧ್ಯಕ್ಷ ರಾಗಿದ್ದು ಸಲ್ಲಿಸಿದ ಭಾಷಾಸಮಿತಿಯ ವರದಿ 'ಗೋಕಾಕ್ ವರದಿ' ಎಂಬ ಹೆಸರಿನಿಂದ ಕನ್ನಡನಾಡಿನ ಒಳಗೂ ಹೊರಗೂ ಅಲ್ಲೋಲ ಕಲ್ಲೋಲವನ್ನುಂಟುಮಾಡಿದ್ದು, ಹೊಸ ಜನಜಾಗೃತಿ ಸಂಘಟನೆಗೆ ಕಾರಣವಾದದ್ದು ಇನ್ನೂ ಹಸಿಹಸಿಯಾಗಿರುವ ಘಟನೆ. ಇದು ಅವರ ಜೀವನದ ಸ್ಥೂಲ ಪರಿಚಯ.

''ಓರ್ವ ವ್ಯಕ್ತಿಯ ಬಾಳನ್ನು ಬಾಳುವವರು ಬರೀ ಆ ವ್ಯಕ್ತಿಯಲ್ಲ: ಆ ವ್ಯಕ್ತಿಯೊಡನೆ ಅವನ

ದೈವವೂ ಅದನ್ನು ಬಾಳುತ್ತದೆ. ವ್ಯಕ್ತಿಯ ಸಾಹಸವೂ ದೈವ ಸಂಕಲ್ಪವೂ ಒಂದಾಗಿ ಹೊಂದಿಕೊಂಡರೆ ಆ ಜೀವನಕ್ಕೆ ಒಂದು ಏಕ ಸೂತ್ರತೆ ಹಾಗೂ ಪೂರ್ಣತೆ ಸಾಧ್ಯವಾಗುತ್ತದೆ. ಈ ವಿಕಾಸ ಕ್ರಮದಲ್ಲಿ ವ್ಯಕ್ತಿಯ ಸಾಹಸಕ್ಕೆ ದೈವವು ಹೇಗೆ ನೀರೆರೆಯಬಹುದೆಂಬುದು ವಿದಿತವಾಗುತ್ತದೆ. ...ಒಂದು ಪರಿಸ್ಥಿತಿ ಹಾಗೂ ಘಟನಾವಲಯದಲ್ಲಿ ಬೆಳೆದ ಓರ್ವ ವ್ಯಕ್ತಿ ; ಕೌಟುಂಬಿಕ ; ಕನ್ನಡಿಗ ; ಭಾರತೀಯ ; ವಿದ್ಯಾರ್ಥಿ ; ಶಿಕ್ಷಕ ; ಮಾತುಗಾರ ; ಆಡಳಿತಗಾರ ; ಕವಿ ; ಸಾಹಿತಿ ; ಸಾಧಕ ಹೀಗೆ ಒಂದು ಜೀವನಕ್ಕೆ ಅನೇಕ ವಿಕಾಸಕ್ರಮಗಳು''.

ಇಲ್ಲಿಯೇ ಹೇಳಬೇಕಾದ ಮತ್ತೊಂದು ಪೂರಕ ವಿಷಯ–ಅವರ ಮಡದಿ ಶಾರದಾರವರೂ, ಗಂಡನ ಈ ಜೀವನದೊಡನೆ ಸಮಶ್ರುತಿಗೊಂಡು ಸಪ್ತಪದಿ ಹಾಕಿದರು. 'ಸುಮಂಗಲಾಕ್ಷತೆ' ಎಂಬುದು ಶಾರದಾರವರು ಬರೆದ 37 ಕವಿತೆಗಳ ಸಂಗ್ರಹ; 'ಒಲವೆ ನಮ್ಮ ಬದುಕು' ಎಂಬುದು ಆಕೆಯ ಆತ್ಮಕತೆ. ಇವೆರಡು ಕೃತಿಗಳ ಅಭ್ಯಾಸದಿಂದ ಈ ಜೋಡಿಯ ಪರಿಚಯ ಆತ್ಮೀಯವಾಗುತ್ತದೆ.' ಕೇಶವರಾಮಚಂದ್ರ ದಿವೇಕರ ಎಂಬುವರು ಮರಾಠಿ ಭಾಷೆಯಲ್ಲಿ ಬರೆದ ಪುಸ್ತಕವನ್ನು ವಿ.ಕೃ. ಗೋಕಾಕರ ತಂದೆ ಕೃಷ್ಣರಾವ ವಿನಾಯಕ ಗೋಕಾಕರು "ಶ್ರೀಪಂತ ಮಹಾರಾಜ ಬಾಳೇಕುಂದ್ರಿ ಇವರ ಚರಿತ್ರೆ" ಎಂಬ ಹೆಸರಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. ತಂದೆ ಮಾಡಿದ ಈ ಅನುವಾದ ಗ್ರಂಥಕ್ಕೆ ಮಗ ವಿ.ಕೃ. ಗೋಕಾಕರ 'ಕುಸುಮಾಂಜಲಿ'ಯೆಂಬ ಮುನ್ನುಡಿಯಿದೆ. ವಿನಾಯಕರ ಮಗ ಅನಿಲ ಗೋಕಾಕ್ ಹಿರಿಯ

ಐ.ಎ.ಎಸ್. ಅಧಿಕಾರಿಯಾಗಿ ಮಹಾರಾಷ್ಟ್ರ ಸರಕಾರದಲ್ಲಿ ಸೇವೆಯಲ್ಲಿದ್ದಾರೆ.

ಬದುಕಿನ ಆ ಮುಖ ಬಿಟ್ಟು ಇನ್ನು ಬರವಣಿಗೆಯ ಈ ಮುಖವನ್ನು ನೋಡೋಣ. ಇಂದಿನ ಕನ್ನಡ ವಾಙ್ಮಯದಲ್ಲಿ ವಿನಾಯಕರ ಹೆಸರು ಅಗ್ರಪಂಕ್ತಿಯಲ್ಲಿದೆ. ಕವಿಯಾಗಿ, ವಿಮರ್ಶಕರಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಪ್ರಬಂಧ – ಪ್ರವಾಸಕಥನಕಾರರಾಗಿ ಅವರ ಬರವಣಿಗೆ ವಿಪುಲವಾಗಿದೆ; ಕನ್ನಡ – ಇಂಗ್ಲಿಷ್ ಎರಡರಲ್ಲೂ ಅವರ ಲೇಖಣಿ ನಿರರ್ಗಳವಾಗಿ ಹರಿದಾಡಿದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ಮೌಲಿಕವೆನಿಸಿರುವ ಮರ್ಯಾದೆಗಳಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪುರಸ್ಕಾರವೂ ಒಂದು. ವಿನಾಯಕರು 1958ರಲ್ಲಿ ಬಳ್ಳಾರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿದ್ದರು. ಅವರ ಭಾಷಣ ಇಂದಿಗೂ ಮನನೀಯವಾಗಿದೆ. ಸಮ್ಮೇಳನಾಧ್ಯಕ್ಷ ಭಾಷಣಗಳೆಲ್ಲ ಹೀಗಿರುತ್ತವೆಂದು ಹೇಳುವುದು ಸರಿಯಲ್ಲ. ಅವುಗಳಲ್ಲಿ ಉತ್ತಮ, ಸಾಮಾನ್ಯ, ಕಳಪೆ, ಅತಿಕಳಪೆ, ಅಸಾರ – ಉಂಟು. ಕೆಲವು ಮಾತ್ರ ಮೌಲಿಕ, ವೈಚಾರಿಕ, ಸ್ಫೂರ್ತಿದಾಯಕವಾಗಿರುತ್ತವೆ. ವಿನಾಯಕರದು ಉದ್ಬೋಧಕ ಭಾಷಣ. ಅವರ ಸಾಹಿತ್ಯವನ್ನು ವಿವೇಚಿಸುವ ಮೊದಲು ಈ ಸಮ್ಮೇಳನಾಧ್ಯಕ್ಷ ಭಾಷಣವನ್ನು ಪ್ರಸ್ತಾಪಿಸುವುದರಲ್ಲಿ ಔಚಿತ್ಯವಿದೆ. ಇದುವರೆಗೆ ಇಲ್ಲಿ ಅವರ ಬಾಳನ್ನು ತಿಳಿಸಲಾಯಿತು, ಮುಂದೆ ಅವರು ಬರಹವನ್ನು ತಿಳಿಸಲಾಗುವುದು. ಸಮ್ಮೇಳನಾಧ್ಯಕ್ಷ ಭಾಷಣ ಇವೆರಡರ ಸಂಕವಾಗಿದೆ. ಒಂದುಕಡೆ ಅವರ

ಬದುಕು ಹಾದುಬಂದ ಪರಿಯ ಸಿಂಹಾವಲೋಕನ, ಇನ್ನೊಂದು ಕಡೆ ಅವರ ಚಿಂತನೆಯ ವಿಧಾನದ ಪಾರದರ್ಶಕತೆ, ಮತ್ತೊಂದು ಕಡೆ ಲೇಖಕನೊಬ್ಬನ ಪ್ರಜ್ಞಾಪಾತಳಿ – ಈ ಮೂರೂ ಮುಪ್ಪುರಿಗೊಂಡು ಅವರ ಭಾಷಣ ಪರಿಭಾವನಯೋಗ್ಯವಾಗಿದೆ.

ಅವರು ಹುಟ್ಟಿನಿಂದ ಕನ್ನಡಿಗರು, ಬೆಳವಣಿಗೆಯಿಂದ ಭಾರತೀಯ, ಸಂಚಾರದಿಂದ ವಿಶ್ವಮಾನವ. ಅವರ ವ್ಯಕ್ತಿ ಹಾಗೂ ವ್ಯಕ್ತಿತ್ವ ವಿಕಾಸವನ್ನು ಗುರುತಿಸುವುದು ಕಷ್ಟವಾಗಲಾರದು; ನೋಟ ಜಗದಗಲ, ಭಾವನೆ ಮುಗಿಲಗಲ, ಸಮ್ಮೇಳನ ಭಾಷಣದ ಸಾರ ವಿಶ್ವಮಾನವದೃಷ್ಟಿ; ಮುಟ್ಟಿದಲ್ಲಿ ಕಾಣುತ್ತದೆ, ಕಿವಿಗೊಟ್ಟಲ್ಲಿ ಕೇಳುತ್ತದೆ. ''ಎರಡು ಕೋಟಿ ಕನ್ನಡಿಗರಲ್ಲಿ ಅನೇಕರನ್ನು ಬೇರೆ ಒಂದು ಬೇನೆಯೂ ಹಿಡಿದಿದೆ. ಅದು ಸಂಧಿವಾದ. ಕನ್ನಡ ತಾಯಿಯ ಭೌತಿಕ ದೇಹವಿದು ಕನ್ನಡ ನಾಡು; ಆ ನಾಡಿನ ರಕ್ತಚಲನ ಕ್ರಮದಲ್ಲಿಯ ರಕ್ತಾಣುಗಳು ನಾವು, ನಾವು ಕನ್ನಡಿಗರೆಂಬುದನ್ನು ನಮ್ಮಲ್ಲನೇಕರು ಮರೆತಂತಿದೆ. ರಕ್ತಾಣುಗಳ ಸಮೂಹವೊಂದು ತಾಯ ಉತ್ತಮಾಂಗವನ್ನು ವ್ಯಾಪಿಸಿ ತಲೆಯ ಆ ಗೊಮ್ಮಟವೇ ಕನ್ನಡ ನಾಡೆಂದು ಅಲ್ಲಿಯೇ ಬೀಡುಬಿಟ್ಟಿದೆ; ಹರಿದಾಡುತ್ತಿಲ್ಲ. ಕೆಲವು ತಾಯ ಜಠರವೇ ತಾಯಿಯೆಂದು ತಿಳಿದರೆ ಉಳಿದ ಸಮೂಹಗಳು ತಾಯಿಯ ಇನ್ನುಳಿದ ಅಂಗಾಂಗಗಳು ತಮ್ಮವೆಂದು ನಂಬಿವೆ. ಇಂತಹ ವಿಕೃತ ಕನ್ನಡಿಗರೂ ನಮ್ಮಲ್ಲಿದ್ದಾರೆ. ಇವರನ್ನು ತಲೆಗನ್ನಡಿಗ, ಉದರಗನ್ನಡಿಗ, ಕಾಲುಗನ್ನಡಿಗ, ಕೈಗನ್ನಡಿಗರೆಂದು ಕರೆಯಬಹುದು. ಕೈ

ಕಾಲುಗೆಟ್ಟ ಕನ್ನಡತಾಯಿ ಯಾವ ದುಃಸ್ಥಿತಿಗಿಳಿಯ ಬಹುದು? ಉದರರೋಗ, ಅರ್ಧಾಂಗವಾಯು, ಸಂಧಿವಾತ, ಪಾಂಡುರೋಗ - ಹೀಗೆ ಒಂದಲ್ಲ ಹತ್ತು ರೋಗಗಳಿಗೆ ತಾಯಿ ಗುರಿಯಾದಾಳು. ತುಂಡುಗನ್ನಡ ವಿಭಾಗಗಳ ಈ ಅಭಿಮಾನ ಸಕಲವನ್ನೂ ಬದಿಗಿರಿಸಿ ವಿಕಲವನ್ನೇ ಮೆರೆಯಿಸುವ ಆರಾಧನೆ - ಬರಿ ಮಾತೃ ಹತ್ಯೆಯಷ್ಟೇ ಅಲ್ಲ, ಆತ್ಮಹತ್ಯೆಯೂ ಆಗಬಲ್ಲದು. ಸುದೈವದಿಂದ ಕರ್ನಾಟಕದ ಏಕೀಕರಣ ರಕ್ತಾಣು ಗಳ ನಿಯಮಿತ ಸಂಚಾರ ನಡೆದಿದೆ. ಕನ್ನಡ ತಾಯಿಯ ಮೊಗ ಮತ್ತೆ ಕಾಂತಿಯುತವಾಗಿದೆ." (ಪುಟ 153 ಕಸಾಸ ಅಧ್ಯಕ್ಷರ ಭಾಷಣಗಳು, ಸಂಪುಟ 3, 1972) ಕನ್ನಡ – ತಾಯಿ – ಕನ್ನಡಿಗ ಎಂಬುದು ಅತಿಭಾವು ಕತೆಯ ಉದಾಹರಗಳೆಂದು ಹೇಳುವವರುಂಟು. ಇಲ್ಲಿನ ಚರ್ಚೆಯೇ ಬೇರೆ ಸ್ತರದ್ದು. ವಿಶ್ವಸಂಚಾರಿ ಕವಿಜೀವ ವೊಂದರ ಕಾಣ್ಕೆ ಇಲ್ಲಿದೆ. ಅವರ ಇಡೀ ಭಾಷಣ ಇಂದಿಗೂ ಅಭ್ಯಾಸಯೋಗ್ಯ ಹಾಗೂ ಪ್ರಸ್ತುತವಾಗಿದೆ.

ಬರೆಹ : ಕಾವ್ಯ

ಸಮುದ್ರವನ್ನು ಕಾವ್ಯದ ವಸ್ತುವನ್ನು ಮಾಡಿ ಕೊಂಡು ಬರೆದ ಕಾವ್ಯ ಇಲ್ಲವೇ ಪದ್ಯ ಅನೇಕ ಭಾಷೆ ಗಳಲ್ಲಿದೆ. ಕನ್ನಡದಲ್ಲಿ ಹಳಗನ್ನಡ ಕವಿಗಳಿಂದ ಇಂದಿನ ಕವಿಗಳವರೆಗೆ ಕಡಲನ್ನು ಕುರಿತಂ ರಚನೆ ಆಗಿದೆ. ನಿಚ್ಚಂ ಪೊಸತು ಅರ್ಣವಂಬೊಲತಿಗಂಭೀರಂ ಎಂಬ ಪಂಪನ ಸಾಲು, ಅಟ್ಟುವ ತೆರೆ ಎಂದು ಆರಂಭವಾಗುವ ರತ್ನಾ ಕರವರ್ಣಿಯ ಪದ್ಯ, ಕನ್ನಡ ಸಾಹಿತ್ಯದ ವಿದ್ಯಾರ್ಥಿ

ಗಳಿಗೆ ಚಿರಪರಿಚಿತ. ಆದರೆ ಅವರಾಗಲಿ, ಇತರರಾಗಲಿ ಒಂದುಂ ಇಡೀ ಕಾವ್ಯವನ್ನು ಸಾಗರದ ಆಗರವನ್ನಾಗಿಸ ಲಿಲ್ಲ. ಹತ್ತರಲ್ಲಿ ಒಂದು ಎಂಬಂತೆ ಪ್ರಾಸಂಗಿಕವಾಗಿ ಸಮುದ್ರ–ನದಿ ಕುರಿತು ಪದ್ಯ ಬರೆದರು. ವಿನಾಯಕರು ಮೊದಲಿಗರು–'ಸಮುದ್ರ ಗೀತಗಳು'–ಸ್ವತಂತ್ರ ಸಮಗ್ರ ಕಾವ್ಯ ಬರೆದವರು. ಇಲ್ಲಿಯೂ ಅವರು "ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು" ಎಂಬ ನವ್ಯದ ದಿವ್ಯ ಮಂತ್ರ ಉಚ್ಚರಿಸಿದರು, ಹೊಸ ಹಾದಿ ತುಳಿದರು, ನವ್ಯದ ಹರಿಕಾರರಾದರು. ನೆಲದ ನಂಟು ಹರಿದು, ಕಡಲ ಗಂಟು ಬಿರಿದಾಗ ಅರಳಿದ ಕಾವ್ಯ ಸಮುದ್ರ ಗೀತಗಳು (1940).

ಇದರಲ್ಲಿ ಕಡಲು, ಕಡಲತೀರ, ಹಡಗ, ಬ್ರಿಟನ್ನಿನ ದ್ವೀಪದಲ್ಲಿ, ಆತ್ಮವೃತ್ತ – ಅಯ್ದು ವಿಭಾಗಗಳಿವೆ. ವಿನಾಯಕರ ಪ್ರಯೋಗ ಶೀಲ ಚಿತ್ತ ವೃತ್ತಿಯನ್ನು ಇದರಲ್ಲಿ ಸ್ಪಷ್ಟವಾಗಿ ಕಾಣಬಹುದು. ಹಡಗಿನ ಮೇಲೆ ಹೊರಟವರಿಗೆ ಕಣ್ಣು ಕಾಣುವವರೆಗೆ ಹರಡಿಕೊಂಡಿರುವ, ಮೈಚಾಚಿ ಬಿದ್ದಿರುವ ಕಡಲು ಮನ ಸೆಳೆಯುವುದು ಅತಿಶಯವಲ್ಲ; ಆ ಅನುಭವ ಇಂಥದೊಂದು ಉತ್ತಮ ಕಾವ್ಯವಾಗಿ ಮೈತಾಳಿರುವುದು ವಿಶೇಷ. "ಹಡಗದ ಮೇಲಿದ್ದಾಗ ಅದರ ಯಂತ್ರದ ಆರ್ಭಟದಲ್ಲಿ, ಮನಸ್ಸಿ ನಲ್ಲಿ ಯಾವ ತಾನವನ್ನೂ (tune) ಹಿಡಿಯುವುದಾಗು ತ್ತಿರಲಿಲ್ಲ. ಆಗ ತಾನಾಗಿಯೇ ನನ್ನಲ್ಲಿ ಹುಟ್ಟಿ ಬಂತು– ಸ್ವಚ್ಛಂದ ಛಂದ"– ಈ ವಿವರಣೆ ಕವಿಯ ಹಾಡು ಹುಟ್ಟಿದ ಹಿನ್ನೆಲೆಯನ್ನು ನಿಚ್ಚಳಗೊಳಿಸುತ್ತದೆ:

ಸ್ವಚ್ಛಂದ ಛಂದದಲಿ
ಜಲಕ್ರೀಡಾವೃತ್ತದಲಿ
ಅನುದಿನವು ತೆರೆಗಳನು ಹಿಡಿವ ತಾಳ ಲಯದಲ್ಲಿ
ಗೀತವನೊರೆದೆನೆಂದು ಗೇಲ್ ಮಾಡಬೇಡ !

ಸಮುದ್ರವ ಸೆರೆ ಹಿಡಿದವರುಂಟೆ ?
ಬಾವಿಯ ತೋಡಿ ಮುನ್ನೀರ ಬತ್ತಿಸಬಹುದೆ ?
ಅಬ್ಜ ಶಬ್ದಗಳ ಪ್ರಾರಬ್ಧದಲ್ಲಿ ಸಹ
ಮಹಾಬ್ಧಿಯ ಕಣವೊಂದು ಸೆರೆಸಿಕ್ಕದಯ್ಯ !
ಕೊಡದಿರು ಶರಧಿಗೆ ಪಟ್ಟದಿಯ ದೀಕ್ಷೆಯನ್ನು !

ಸಮುದ್ರವ ಸೆರೆಹಿಡಿದವರುಂಟೆ ಎಂದು ಕವಿ ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಒಳ್ಳೆಯ ಉತ್ತರ ಅವರ ಈ ಸೊಗಸಾದ ಕಾವ್ಯ. ಹೊಸಗನ್ನಡ ಸಾಹಿತ್ಯದಲ್ಲಿ ಕಡಲು ಹೀಗೆ ಕಾವ್ಯವಾಗಿರುವುದು ವಿನಾಯಕರಲ್ಲಿ ಬಿಟ್ಟರೆ ಕಾರಂತರ ಕಾದಂಬರಿಗಳಿಗೆ ಮರಳಬೇಕಾಗುತ್ತದೆ.

ಹಳಗನ್ನಡ ನಡುಗನ್ನಡ ಹಾಗೂ ಹೊಸಗನ್ನಡದ ಆರಂಭದ ನಾಲ್ಕು ದಶಕಗಳ ಕನ್ನಡ ಸಾಹಿತ್ಯ ಕಂಡ ಛಂದೋನಿರಿಗೆಗಳು ಈ ಕವಿಯ ಹೊಸ ಕಾಣ್ಕೆಗೆ ಮಿತಿಗಳೆನಿಸಿದುವು. ಹೊಚ್ಚ ಹೊಸ ಅನುಭವ ಸಂವೇದನಗಳಿಗೆ ನೂತನ ಅಭಿವ್ಯಕ್ತಿ ಮಾಧ್ಯಮ ಬೇಕೆನಿಸಿತು. ನವನವೋನ್ಮೇಷಶಾಲಿನಿಯಾದ ಸಾಗರವನ್ನು ಸೆರೆಹಿಡಿದ ಕವಿಯ ಪ್ರಯತ್ನದ ಸಾಫಲ್ಯದಂತೆ, ಅದಕ್ಕೆ ಸ್ವಚ್ಛಂದ ಛಂದದ ಆಕಾರ ಕೊಟ್ಟಿರುವುದೂ ಆ ಕಾಲಕ್ಕೆ ದೊಡ್ಡ ಸಾಧನೆ. ಬೆಳಕಿನಲ್ಲಿ ಬೆಳುದಿಂಗಳಲ್ಲಿ, ಕತ್ತಲಲ್ಲಿ, ಬೆಳಗು ಬೈಗುಗಳಲ್ಲಿ, ನಡು ಹಗಲು ನಡು ಇರುಳಿನಲ್ಲಿ, ಕಡಲನ್ನು ಕಂಡು, ಕನಸು ಮನಸುಗಳಲ್ಲಿ ತುಂಬಿಕೊಂಡ

ಕವಿ ಪಟ್ಟ ಸಂಭ್ರಮ, ಪಡೆದ ವಿಸ್ಮಯ, ವಿನೂತನ ಅನುಭವ ನೂರು ವಿಧ ನೂರು ಮುದ.

ಸನಾತನ ಸಮುದ್ರರಾಜ ಕವಿಗೆ ದರ್ಶನ ಕೊಡು ವುದು ಒಮ್ಮೆ ಕಿನ್ನರ ಕಿಂಪುರುಷ ನೌಕೆಗಳಂತೆ, ಇನ್ನೊಮ್ಮೆ ಕಾಳ ರಕ್ಕಸರ ಕೋರೆ ಹಲ್ಲುಗಳಂತೆ, ಮತ್ತೊಮ್ಮೆ ಗೋಪುರಗಳ ಕಟ್ಟಿ ಗೋಪುರಗಳನಳಿಸುವ ರುದ್ರ ಪುರುಷನಾಗಿ, ಮಗದೊಮ್ಮೆ ಅರುಣನ ಕುದುರೆ ಯಂತೆ – ಮತ್ತಗಜದಂತೆ – ಹೆಡೆಯಲ್ಲಿ ಪುಷ್ಪರಾಗವಿಪ ಕಾಳಸರ್ಪಗಳಂತೆ–ಹೀಗೆ ಪುರಾಣ ಪ್ರಜ್ಞೆಯ ಬೆಳಕಿನಲ್ಲಿ ಸುರುಳಿ ಉರುಳಿಸಿದಂತೆ ಅರಳಿ ನಿಲ್ಲುವ ಸಂಕೇತಗಳು, ಪ್ರತಿಮೆಗಳು ಓದುಗನ, ಮನಸೆಳೆಯುತ್ತವೆ.

'ಕಡಲತೀರ', ಕಾವ್ಯದ ಎರಡನೆಯ ಭಾಗ, ಚರಿತ್ರೆ ವಿಜೃಂಭಿಸುವ ನೆನಪಿನ ಸಂಪುಟ. ಹಡಗು ಭಾರತದಿಂದ ಹೊರಟು ಬ್ರಿಟನ್ನಿನವರೆಗೆ ಹಾದುಬರುವ ಕಡಲತೀರದ ಸಾಮ್ರಾಜ್ಯ–ನಗರಗಳ ಇತಿಹಾಸವನ್ನು ಕವಿ ನೆನೆಯುತ್ತಾರೆ, ಅಲ್ಲಲ್ಲಿನ ನಿಸರ್ಗದ ವೈಶಿಷ್ಟ್ಯ ವಿಲಕ್ಷಣತೆಯನ್ನು ಮೆಲುಕು ಹಾಕುತ್ತಾರೆ. ಏಡನ್ ಆಫ್ರಿಕ ಸುಯೆಜ್ ಕ್ರೀಟ ಸ್ಟ್ರಾಂಬೊಲಿ ನೇಪಲ್ಸ್ ಮೊದಲಾದವು ಕವಿ ಮನವನ್ನು ಕಲಕಿ ಕೆದಕಿ ಸ್ಪಂದಿಸಿ ಪ್ರತಿಕ್ರಿಯಿಸಿರುವ ರೀತಿ ಪರಿಭಾವನ ಯೋಗ್ಯವಾಗಿದೆ. ಹಾಳು ಹಂಪೆಯಾದ ಏಡನ್ನಿನ ಬೀಳಿನೊಂದಿಗೆ ಪೈಗಂಬರರ ನೆನಪಿನ ಸಾಂತ್ವನವಿದೆ. ಬಿಳಿಯರ ಕಾಲ್ ತುಳಿತಕ್ಕೆ ಒಳಗಾದ ಆಫ್ರಿಕಾದ ನಿಟ್ಟುಸಿರಿಗೆ ಕವಿ 'ಹೆದರಬೇಡ ಆಫ್ರಿಕವೆ ಬರಬಹುದು ನಿನ್ನ ಹುಣ್ಣಿಮೆ ನಾಳೆ' ಎಂದು ಮೈಸವರುತ್ತಾರೆ. ಇದು ನೆನಪಿನ ದೋಣಿಯಲ್ಲಿ ಮಾಡಿದ ವಿಹಾರ.

ಹಡಗ, ಕಾವ್ಯದ ಮೂರನೆಯಭಾಗ, ಕವಿ ಪಯಣಿಸುತ್ತಿರುವ ಪುಟ್ಟ ಪ್ರಪಂಚವಾದ ಹಡಗಿನ ಬದುಕನ್ನು ಚಿತ್ರಿಸಂತ್ತದೆ. ಪಾರ್ಥನ ರಥದಂತೆ, ಮೇಘ ಶ್ಯಾಮನ ಮೈಬಣ್ಣದ ಸಲಿಲದಿಂದ ತನಿವೆಣ್ಣೆಯ ತೆಗೆವ ಗೋಪಿಯಂತೆ, ತನ್ನ ಸ್ವಯಂಪೂರ್ಣ ವಿಂಧ್ಯಾಚಲ ದಂತೆ ಗಂಭೀರವಾಗಿ ಸಾಗುವ ಹಡಗಿನೊಳಗಿನ ರವರವ ನರಕ ಹಾಗೂ ಯಮಲೋಕಗಳ, ಆಸೆ, ನಿರಾಸೆಗಳ, ಅನ್ಯಾಯಂ ದಾಸ್ಯಗಳ ಪ್ರತೀಕ ಮುಖವನ್ನೂ ಕವಿ ಅನಾವರಣಗೊಳಿಸಿ ತೋರಿಸುವ ಅದ್ಭುತಕ್ಕೆ ಬೆರಗಾಗು ತ್ತೇವೆ :

ಹಡಗವಲ್ಲವಯ್ಯಾ ಇದು
ಹಡಗಡಕ ನಿಶಾಚರ
ಅಹಿರಾವಣ ಮಹಿರಾವಣ
ಶೂರ್ಪನಖಿಯ ಆಪ್ತ ಬಂಧು

x x

ಹೇಗೆ ಕಣ್ಣ ಬಿಡುತಿದೆ ನೋಡು
ಒಕ್ಕಣ್ಣ ರಾಕ್ಷಸನಂತೆ
ಹೇಗೆ ಒದ್ದಾಡುತಿದೆ ನೋಡು
ಚಿಗರೆಯ ಮೆದ್ದ ಹೆಬ್ಬಾವಿನಂತೆ

x x

ಮಿಕಿಮಿಕಿ ನೋಡುತಿದೆ ನೋಡು
ಇಲಿಯ ಗುದ್ದುಗಳಂಥ ದಿಟ್ಟಿಗಳಿಂದ
ಮೈ ತುಂಬ ದೀಪ ಹಚ್ಚಿಕೊಂಡು
ಹೊಟ್ಟೆತುಂಬ ಇದ್ದಲಿಯಿರಿಸಿ
ತನ್ನ ಸ್ನಾಯುವಿನ ಮೇಲೆ
ಧಮನಿಯ ಕೆಳಗೆ
ಓಡಾಡಿಸುತ್ತಿದೆ ನಮ್ಮನ್ನು

ಯಂತ್ರದ ಈ ಉಲ್ಲೋಲ ಕಲ್ಲೋಲದಾಳದಲ್ಲಿಯೂ ನಿಯಂತ್ರಿತವಾಗಿರುವ ಮಾಟವನ್ನು, ಕ್ರಮವನ್ನು, ಸಿಸ್ತನ್ನು, ಚಂದವನ್ನು ಉಲ್ಲೇಖಿಸುತ್ತಾರೆ. ಇಂಗ್ಲೆಂಡ್ ವಿಲಾಸ ವೈಭವಗಳ ತವರು. ನಿಸರ್ಗದ ರಮ್ಯತೆ ನೋಡಿದಲ್ಲಿ ನಿಂತಿರುತ್ತದೆ. ಇಂಡಿಯಾ–ಇಂಗ್ಲೆಂಡ್ ಎರಡು ತಂದಿ; ತೀರ. ಸ್ವಾತಂತ್ರ್ಯಪೂರ್ವದಲ್ಲಿ ಕವಿ ಈ ಪಶ್ಚಿಮ ಪ್ರವಾಸ ಮಾಡಿದ್ದಾರೆ. ಅಂತರಾಳದಲ್ಲಿ ವಿಷಾದ ನಿರ್ವಿಣ್ಣತೆ ಹೆಪ್ಪುಗಟ್ಟಿದೆ. ಹೃದಯ ಸಂವಾದ ಏರ್ಪಡುವುದರಲ್ಲಿ ತೊಡಕಾಗಿದೆ. ಈ ಪರಿಚಿತ ನಾಲ್ಕನೆಯ ಭಾಗವಾದ ಬ್ರಿಟನ್ನಿನ ದ್ವೀಪದಲ್ಲಿ ಕೆನೆಗಟ್ಟಿದೆ. ಮಾನವೀಯ ಮೌಲ್ಯಗಳಲ್ಲಿ ನಂಬಿಕೆ ಬೇರು ಬಿಟ್ಟಿರುವ ವಿನಾಯಕರ ಆತ್ಮಪ್ರತ್ಯಯದ ಅಭಿವ್ಯಕ್ತಿಯನ್ನೂ ಈ ಭಾಗದಲ್ಲಿ ಕೇಳಬಹುದು :

ಆಂಗ್ಲ ಭೂಮಿಯಲಿಂದು ವನವಾಸವಿದ್ದು
ನೇಹಿಗರ ತೊರೆದೊಲವಿನುಪವಾಸ ಬಿದ್ದು
ಎಲ್ಲೆಡೆಗೆ ಸಾರ್ವಭೌಮರ ನೆಲದ ಮೇಲೆ
ಆಳೆಂಬ ತಿಳಿವಿನಂಕುಶ ತಿವಿವ ವೇಳೆ
ಬೀದಿ ಹೋಗುವ ನಾಯಿಕೂಡ ಬೊಗಳುವುದು
ಎಲ್ಲಿಂದಲೋ ಹಕ್ಕಿ ಕೂಡ ತೆಗಳುವುದು

x x

ನಿನ್ನ ಮಕ್ಕಳು ಹಿಂಡಿ ಹಿಪ್ಪೆಮಾಡಿದ ಸಿಪ್ಪೆನಾನು

x x

ನನ್ನ ನಾಡಿನ ಹಾಡಿಗೆಂದು ಮುಡಿಪಿರಲಿ ನನ್ನ ಜೀವ

x x

ಇಲ್ಲಿ ಸಾಮ್ರಾಜ್ಯವಿತ್ತು ಸಕಲ ಸಂಪತ್ತಿತ್ತು
ಕುಬೇರನ ಖಜಾನೆಯಿತ್ತು !
ಇಂದಿಗೆ ಭಾರತೀಯರಿಗೆ ತಿನ್ನಲು ಕೂಳಿಲ್ಲ
ಕುಡಿಯಲು ನೀರಿಲ್ಲ !

x x

ಇಂದು ಬ್ರಿಟನ್ನಿಗೆ ನಡೆದಿಹರು ಜೊತೆಗಾರರು
ಹಿಡಿ ಹೊನ್ನಾಸೆಗೆ
ನಡೆದಿಹನು ನಾನು–ವಿದ್ಯೆಯ ಪಡೆಯಲೆಂದು
ಇದೊಂದು ಪರಮವಿಚಿತ್ರ

ವ್ಯಾಖ್ಯಾನ ನಿರಪೇಕ್ಷ ಸಾಲುಗಳು. ಸಮಕಾಲೀನತೆಗೆ ಸ್ಪಂದಿಸಿರುವ ರೀತಿ ಅದ್ಭುತ. ಯಾವುದೇ ಕವಿಗೆ ಗೌರವ ತರುವ ಕಾವ್ಯ 'ಸಮುದ್ರ ಗೀತಗಳು.' ಪುಟಗಳ ಸಂಖ್ಯೆಯಲ್ಲಿ ಇದರ ಹತ್ತರಷ್ಟಿರುವ 'ಭಾರತ ಸಿಂಧು ರಶ್ಮಿ' ಗೀತ ಸತ್ವದಲ್ಲಿ ಇದೇ ಮಹತ್ವದ್ದೆನಿಸುತ್ತದೆ. ಈ ಕಾವ್ಯ ವಿನಾಯಕರ ವಾಙ್ಮಯ ನಭದಲ್ಲಿ ಧ್ರುವನಕ್ಷತ್ರ ; ಕಾವ್ಯಗಾನದಲ್ಲಿ ಪಲ್ಲವಿ.

ಗಂಗಾಧರ ಚಿತ್ತಾಲರ 'ಮನು ಕುಲದ ಹಾಡು' ಸಂಕಲನದಲ್ಲಿ ಸೇರಿರುವ 'ಐದು ಸಮುದ್ರ ಗೀತಗಳು' ಎಂಬುದು ತನ್ನ ಪ್ರಾಸಾದಿಕ ಚಿತ್ರಕ ಗುಣದಿಂದ ಬೆರಗುಗೊಳಿಸುವ ಕಾವ್ಯವಾಗಿದ್ದು 'ಸಮುದ್ರ ಗೀತಗಳು' ಕಾವ್ಯದೊಂದಿಗೆ ಅವಶ್ಯ ಓದುವಂತಿದೆ.

"ಸಮುದ್ರ ಗೀತಗಳನ್ನು ನಾನು ಪ್ರಯೋಗಾಭಿಲಾಷೆಯಿಂದ ಬರೆಯಲಿಲ್ಲ. ಬೇರೆ ದಾರಿ ಕಾಣದೆ ಅಸಹಾಯಕನಾಗಿ ಬರೆದೆ. ಅದರಲ್ಲಿಯ ಮೊದಲಿನ ಕೆಲವು ಕವಿತೆಗಳನ್ನು ಇಂಗ್ಲೆಂಡಿನಿಂದ ಮುಗಳಿಯವರಿಗೆ ಕಳಿಸಿ

ದಾಗ : ಸರಸವಾಗಿವೆ ; ಆದರೆ ಛಂದಸ್ಸು ದೋಷ ಮಯುವಾಗಿದೆಯೆಂದು ಅವರು ನನಗೆ ಬರೆದಂತೆ ನೆನಪಿದೆ. ವಚನಗಳಿಗೆ ಹಾಗು ಬೇಂದ್ರೆಯವರ 'ಕರುಳಿನ ವಚನ'ಗಳಿಗೆ ಒಂದು ಛಂದೋರೀತಿಯಿದ್ದರೆ ಈ ಕವನಗಳಿಗೂ ಇದೆಯೆಂದು ನಾನು ಉತ್ತರ ಕೊಟ್ಟನೆಂದು ಕಾಣುತ್ತದೆ. ಅಂತೂ ತಮ್ಮದೇ ಆದ ಒಂದು ಛಂದಸ್ಸನ್ನು ಈ ಕವಿತೆಗಳು ಪಡೆದುಕೊಂಡು ಬಂದವು" (ನವ್ಯತೆ, ಪುಟ 126–127).

ಭಾವಗೀತಾತ್ಮಕ ಹಾಗೂ ಗೇಯಾತ್ಮಕ ಗುಣ ಮಿಶ್ರಣದಿಂದ, ಬಳುಕುವ ಆಡು ಮಾತಿನ ಲಯಗಾರಿಕೆಯಿಂದ, ಸಂಕೀರ್ಣ ಅಭಿವ್ಯಕ್ತಿಯಿಂದ ಸಮುದ್ರ ಗೀತಗಳು ಕನ್ನಡದ ಸಂದರ್ಭದಲ್ಲಿ ಇಂದಿಗೂ ಅನನ್ಯ ಕಾವ್ಯ. ಕಣ್ಣು ಕುಕ್ಕಿಸುವ, ಭಾವ ಉಕ್ಕಿಸುವ, ಕಡಲ ವೈಭವ ಇದೇ ಮೊದಲಬಾರಿಗೆ ಕಾವ್ಯ ರೂಪದಲ್ಲಿ ಕನ್ನಡ ಭಂಡಾರದಲ್ಲಿ ಪ್ರತಿಷ್ಠಿತವಾಯಿತು. ಪ್ರಥಮ ವಿಶ್ವ ಕನ್ನಡ ಸಮ್ಮೇಳನ ನೆನಪಿಗೆ ಹೊರತಂದ ಪುಸ್ತಕಗಳಲ್ಲಿ ಈ ಕಾವ್ಯವನ್ನು ಪ್ರಕಟಿಸಲು ಸರ್ವಾನುಮತದಿಂದ ಪ್ರಕಟನ ಸಮಿತಿಯು ಒಪ್ಪಿಗೆ ನೀಡಿತು ; ಆ ಸಮಿತಿಯ ಮುಖ್ಯ ಸಂಚಾಲಕನಾಗಿದ್ದನೆಂಬ ವೈಯಕ್ತಿಕ ಹರ್ಷ ನನ್ನದು (1982–83).

'**ಪಯಣ**'ದ ಹಾದಿಯಲ್ಲಿ ತೆರೆದಮನ, ತೆರೆದ ಕಣ್ಣುಗಳಿಂದ ಹೊರಟ ಈ ಗಂಭೀರ 'ಕಲೋಪಾಸಕ'ರಾದ ವಿನಾಯಕರ ದೃಷ್ಟಿ ನಭದ ಮೇಲೆ ನೀರ ಮೇಲೆ ನೆಲದ ಮೇಲೆ ತ್ರಿವಿಕ್ರಮ ಗತಿಯಲ್ಲಿ ಹರಿದಾಡಿದೆ. ನೆಲ–ಬಾನುಗಳನ್ನು ತನ್ನ ತೆಕ್ಕೆಯ ಕಕ್ಷೆಗೆ ತಂದು

ಕೊಳ್ಳುವ ಸಾಹಸದ ಫಲವಾಗಿ ಮೂರ್ತಗೊಂಡ ಕಾವ್ಯ **'ದ್ಯಾವಾ ಪೃಥಿವಿ'** (1957). ಈ ಖಂಡ ಕಾವ್ಯ ಅವರಿಗೆ ಕೇಂದ್ರ ಸಾಹಿತ್ಯ ಅಕಾದೆಮಿ ಪುರಸ್ಕಾರ (1960) ಗಳಿಸಿಕೊಟ್ಟ ಕಾವ್ಯವೂ ಹೌದು. ಕಡಲನ್ನು ಕಂಡು ವಿಸ್ಮಯಗೊಂಡು ರಸ ಪರವಶನಾದ ಕವಿ ಜಲದಿಂದ ನೆಲಕ್ಕೆ, ಭೂಮಿ ಅವಕಾಶಗಳನ್ನು ಒಂದು ಗೂಡಿಸುವ ಸಾಹಸಕ್ಕೆ ಕೈಹಾಕಿದ್ದಾನೆ. ಋಗ್ವೇದ ಸೂಕ್ತಗಳಲ್ಲಿ, ಭಗವದ್ಗೀತೆಯಲ್ಲಿ ಪ್ರಾಸಂಗಿಕವಾಗಿ ಬಂದ ಒಂದು ಮಾತು 'ದ್ಯಾವಾ ಪೃಥಿವೀ' ಎಂಬುದನ್ನು ಎತ್ತಿಕೊಂಡು ಅದರ ಸುತ್ತ ಕಾವ್ಯ ಹೆಣೆದಿದ್ದಾರೆ–ನೀರದ ಮತ್ತು ಇಳಾಗೀತ ಎಂಬ ಎರಡು ಪರಸ್ಪರ ಪೂರಕ ಭಾಗಗಳಲ್ಲಿ. ಭಾರತೀಯ ಪರಂಪರೆ ಒದಗಿಸಿದ ಪುರಾಣ ಪ್ರಜ್ಞೆಯೊಂದಿಗೆ ನಾಗರಿಕತೆ ದೊರಕಿಸಿರುವ ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಯನ್ನು ಗರ್ಭೀಕರಿಸಿಕೊಂಡಿರುವ ವಿನಾಯಕ ನೋಟ 'ದ್ಯಾವಾ ಪೃಥಿವಿ' ಯಲ್ಲಿದೆ. ರಮ್ಯ ಕವಿ ಷೆಲ್ಲಿಯ ಹಾಗೂ ಕಾವ್ಯರ್ಷಿ ಅರವಿಂದರ ಕಾವ್ಯ–ದರ್ಶನದ ಪ್ರಭಾವವೂ ಬೆರೆತಿದೆ. ಮಧುರ ಚೆನ್ನರ 'ನನ್ನನಲ್ಲ' (1933)ದಲ್ಲಿ ಬರುವ 'ದೇವತಾ ಪೃಥಿವಿ' ಕಾವ್ಯ ವಿನಾಯಕರ ಈ ಕಾವ್ಯಕ್ಕೆ ಪರೋಕ್ಷ ಪ್ರೇರಣೆಯಾಗಿದೆ ; 'ದ್ಯಾವಾ ಪೃಥಿವಿ' ಎಂಬ ಮಾತು ಕೂಡ ಮಧುರ ಚನ್ನರ ಕಾವ್ಯದಲ್ಲಿ ಬಂದಿದೆ ; ಅವರ ಕಾವ್ಯ ಕೂಡ ಅರವಿಂದರ ತಾತ್ವಿಕ ನಿಲುವಿನಿಂದ ಬರೆದದ್ದು.

ಹತ್ತು ಎಸಳುಗಳ 'ನೀರದ' ಇದರ ಮೊದಲ ಭಾಗದಲ್ಲಿ ಮೋಡಗಳ ನಾಡನ್ನು ನೋಡುತ್ತೇವೆ.

ಮೋಡಗಳನ್ನು ನೋಡದ ಮಗು-ಮನುಷ್ಯ ಇಲ್ಲ. ನಾವು ಭಾವಿಸಿದಂತೆ ಊಹಿಸಿದಂತೆ ಕಲ್ಪಿಸಿದಂತೆ ಅದು ತೋರುತ್ತದೆ. ನೀಲಿಮಾರ್ಗದಲ್ಲಿ 'ಓಡ'ದಂತೆ ಓಡುವ ಮೋಡದ ಚೆಲುವನ್ನು ನೋಡಿ ಅಚ್ಚರಿಯಿಂದ ಬೆರಗಿನ ಸೆರಗು ಹಿಡಿದ ಕವಿಗೆ ವಿವಿಧ ವೇಷ ತೊಟ್ಟು ಚಿತ್ರ ಮಾಲೆ ತೇಲಿ ಬರುತ್ತದೆ:

ಬಾಂಬೊಲದಲ್ಲಿ ಹುಂಬ ಗಾಳಿಗುರುಬ
ತರುಬಿದುಣ್ಣಿ ಕುರಿಮರಿಗಳ ಕಿರಿ ಹಿಂಡು :
ಇದೂ ಒಂದು ಸೋಂಗು
ಮಲೆನಾಡಿನ ದಟ್ಟಡವಿಯ ಒಡಲಿನಲಿ
ಮತ್ತ-ಗಜ-ಸಮೂಹ ;
ದಾಳಿಯಿಟ್ಟ ದುರ್ಗದ ಬುರುಜಿನ ಮೇಲೆ
ಕೊತ್ತಳದಳತೆಯ ತೊತ್ತುಳಿಯುವ ಗುಲ
ಗಂಜಿಗಣ್ಣಿನಾ ಬೇಡರ ಪಡೆ, ಆಹ !

ಪ್ರತೀಕಗಳ ಮೂಲಕ ಮೇಘಮಾಲೆ ಕವಿಗೆ ಜೀವನ ರಹಸ್ಯವನ್ನು ಪ್ರತೀತಗೊಳಿಸುತ್ತದೆ. ಜೀವನ ವೊಂದೇ ಜೀವಿತದೆದುರಿನ ಗುರಿಯು – ಎಂದು ಕವಿಯು ಕಿವಿಗೆ ಈ ಮೇಘದೂತ ಊದುತ್ತಾನೆ. ನೈಜವು ಪರಿವರ್ತನೆ, ಮರಣವು ಮಾಯೆ – ಎಂಬ ಸೂಕ್ಷ್ಮವೂ ಬಯಲಾಗುತ್ತದೆ. ಒಮ್ಮೆಲೇ ಕವಿಗೆ ಭಾಗವತ ಪ್ರಜ್ಞೆ ಜಾಗೃತವಾಗಿ ಭಗವಂತನ ಬಾಲ್ಯ ಹೊಳೆಯುತ್ತದೆ: 'ಸೌಂದರ್ಯದ ನಿರ್ಜರಶಿಶು ಮೇಲೊರಗಿ ತೇಲಿದಾಲ ದೆಲೆ'ಯ ಹಾಗೆ ಮೇಘ ಗೋಚರಿಸುತ್ತದೆ. ಮುಂದೆ ಈ 'ನೀರದ'ವು 'ನಾರದ'ನೂ ಆಗುತ್ತದೆ. ನಾರದ ಎಂಬುದು ನೀರದಕ್ಕೆ ಪ್ರಾಸವಾಗಿ ಬಂದ ಶಬ್ದವಷ್ಟೇ ಆಗದೆ ನೆಲ-ಮುಗಿಲುಗಳನ್ನೂ, ದೇವ-ಮಾನವರನ್ನೂ

ಸೇರಿಸುವ ಸೇತುವೆಯೆಂಬ ನಂಬಿಕೆಯನ್ನೂ ಸಮರ್ಥವಾಗಿ ಧ್ವನಿಸುತ್ತದೆ. ನೆಲದ ಜಲದಿಂದ ಸಾರಹೀರಿ, ಆಕಾರ ತಳೆದು, ಬಾನಿಗೇರಿ ಮತ್ತೆ ಭೂಮಿಗಿಳಿಯುವ ಮುಗಿಲು ಈಗ ನಾರದ ತತ್ವವನ್ನು ಸಾರುತ್ತದೆ. ವಿಜ್ಞಾನ ದರ್ಶನ–ಕಲ್ಪನೆ ಇವು ಮೂರೂ ಸೇರಿ ಇಲ್ಲಿ ಚಿಂತನೆಗೆ ಗ್ರಾಸ ಒದಗಿಸಿವೆ.

ಕವಿಯ ಕಲ್ಪನೆ ಕೆಲಸ ಮಾಡುವುದರ ದಾರಿ–ಗುರಿಗಳನ್ನು ಅರಸುವುದು ಕಷ್ಟ. ಅದರದು ವಿಚಿತ್ರಗತಿ. ಸರಳವಾಗಿ ಸಾಗಿದ್ದ ವರ್ಣನೆ ಮೂರನೆಯ ಎಸಳಿನಲ್ಲಿ ಸಂಕೀರ್ಣವಾಗುತ್ತದೆ. 'ಯಂತ್ರ ಯೋಗಿಗಳ ಹೋಮ ಹವನ'ಗಳೊಂದಿಗೆ 'ಗಿರಣಿಯ ಧೂಮ'ವೂ ಎಂಜಿನ್ನಿನ ಹೊಗೆ'ಯೂ ತಾಗಿ ನೀಲಿಮದೊಡಲಲ್ಲಿ ಮೇಘವಾಗಿರುವಂತೆ ಕವಿತೆ ಭಾಸವಾಗುತ್ತದೆ.

ಮನುಕುಲದ ಜೀವನದ ತಪ್ತ ಕ್ಷಾರೋದಧಿಯ
ಬಾಷ್ಪದೊಲು ಸೇರಿಹವು ಮುಗಿಲ ಗುಮ್ಮಟದಲ್ಲಿ

*   *

ದುರ್ಗಾಮಾತೆಯ ವಾಹನದೊಲು ಮೆರೆದು
ಆಯಾಲನು ಕೊಡವಿ
ಮುನ್ನಡೆದಿಹುದೀ ಪಂಚಾನನ ಮೇಘ
ಮರಿಗಳ ಮೈದಡವಿ
ವೀಣಾ ಪಾಣಿಯು ಧ್ಯಾನ ಮಗ್ನಳಿರಲು
ಅವಳ ಮೇಘ ಮಯೂರ
ಸೋಗೆ ಗರಿಗಳನು ಮುಗಿಲ ತುಂಬ ಹರವಿ
ನಡೆದಿದೆ – ದೂರ, ದೂರ !

ಮನುಷ್ಯ ಲೋಕದಲ್ಲಿರುವ ಒಳ್ಳೆಯದು ಕೆಟ್ಟದ್ದೆಲ್ಲವೂ ಮುಗಿಲಲ್ಲೂ ಇವೆ. ಬೆದರುಗಂಗಳ ಸಾರಂಗ

ಜತೆಗೆ ಕ್ರೂರದಂಷ್ಟ್ರವರಾಹ, ಎಂಟು ಕಾಲಿನ ಅಷ್ಟಾವಕ್ರ ಏಡಿ, ಗಗನೋದಧಿಯಲ್ಲಿ ನೌಕೆಗಳಿಗೆ ಸುರಂಗವಾಗುವ ತಿಮಿಂಗಿಲ–ಮುಂತಾದ ಅಶುಭಗಳೂ ಕೂಡಿ ಮೋಡ ದಲ್ಲಿವೆ. 'ಕುಂಬಾರನ ತಿಗರಿಯಮೇಲೆ ಉದಿಸುವ ಕೊಡಪಾನದ ಕೋಟೆ'ಯಂತೆ ಕಾಣುವ ಮೋಡ ಮುಂದೆ ನೆಲಕ್ಕವತರಿಸುವ ಕರುಣೆಯಾಗಿದೆ :

ಸೂರ್ಯೋದಯ–ಸೂರ್ಯಾಸ್ತ ವೃಕ್ಷದಲ್ಲಿ
ಮಾಗಿ ಪಯೋಧರ ಫಲವು

ಅವತರಿಸಿದೆ ರಸಗಂಗೆಯಾಗಿ ಮತ್ತೆ–
ನೆಲಸುತ ನೆಲದೊಳಗದರೊಲವು !

ಪ್ರಾರ್ಥನೆಯ ರೂಪವಲ್ಲಿ ಕವಿ ಶುದ್ಧ ಚೈತ್ಯ ತತ್ವವನ್ನು ಬರಮಾಡಿಕೊಳ್ಳುತ್ತಾರೆ. ದೇವ ಕರುಣೆ ಯಿಂದ, ಸಂಕಲ್ಪದಿಂದ ಶುಕ್ರೋದಯ ಸಂಭವಿಸ ಬಹುದು ಎಂಬುದು ಕವಿಯ ವಿಶ್ವಾಸವಾಗಿದ್ದು ಇದರ ಸಂಕೇತವಾಗಿ ಬಂದಿರುವ ಇಂದ್ರನ ಚಿತ್ರ ಸಶಕ್ತವಾಗಿದೆ. ಇದರ ಅರಿವಿಗೆ, ಅರ್ಥ ಗ್ರಹಿಕೆಗೆ ಪುರಾಣಗಳ ಹಿನ್ನೆಲೆ ಯಿದ್ದರೆ ಕ್ಷೇಮ. ಇದರ ಮುಂದಿನ ಭಾಗದ ಸ್ವಾರಸ್ಯಕ್ಕೆ ಗ್ರೀಕ್ ಪುರಾಣದಲ್ಲಿ ಬರುವ ಇಕ್ಸಾಯನ್ – ಜ್ಯೂಸ್- ಹೀರಾ ಕಥೆ ತಿಳಿದಿರಬೇಕಾಗುತ್ತದೆ. ಗ್ರೀಸಿನ ಕಥೆಯ ಆಶಯವನ್ನು ಭಾರತೀಯಗೊಳಿಸಿರುವ ರೀತಿಯನ್ನು ಪ್ರಶ್ನಿಸಬೇಕಾಗಿಲ್ಲ, ಈ ಪರಿವರ್ತನೆಯ ಸಾರ್ಥಕತೆ ಯನ್ನು ಪರಿಶೀಲಿಸಬೇಕು.

ಇಕ್ಸಾಯನ್ ಪ್ರಕರಣವನ್ನು ಇಕ್ಷ್ವಾಯನವನ್ನಾಗಿ ಸುವಲ್ಲಿ ಇಕ್ಷು–ಇಂದ್ರ–ಶಚಿಯರು ಮೂಲದ ಮೂರು ಪಾತ್ರಗಳಿಗೆ ಸಂವಾದಿಯಾಗಿ ಬಂದಿದ್ದಾರೆ. ಇಕ್ಷು

ಕೃತಘ್ನನಾಗಿ ಇಂದ್ರನ ಮಡದಿ ಶಚಿಯನ್ನು ಶೃಂಗಾರ ತುಂಬಿದ ಬಯಕೆಯ ನೋಟದಿಂದ 'ನಾ ಪುರುಷ ನೀನೆ ಶಕ್ತಿ' 'ಓ ಚೆಲುವೆಯೆ' ಎಂದು ದಾಹದಿಂದ ಧಾವಿಸುತ್ತಾನೆ. ಇಂದ್ರನು ಶಚಿಯಂತಿರುವ ಮೋಡವನ್ನು ಕೊಡಲು ಇಕ್ಷು ಅದನ್ನೇ ಭೋಗಿಸುತ್ತಾನೆ. ಅರ್ಧ ಕುದುರೆ ದೇಹದ ಅರೆಮಾನಿಸರು ಹುಟ್ಟುತ್ತಾರೆ: ಶಾಕ್ತರು ವಿಶಿಷ್ಟಾದ್ವೈತಿಗಳು, ಅದ್ವೈತಿಗಳು, ದ್ವೈತಿಗಳು ಬೌದ್ಧರು, ಜೈನರು, ಚಾರ್ವಾಕರು ಮೊದಲಾದ ದಾರ್ಶನಿಕರು. ಈ ಸಂತಾನ ಪಾಪಪ್ರಜ್ಞೆಯಿಂದ ಬಂದದ್ದು, ದೋಷಗಳಿಂದ ಕೂಡಿದ್ದು.

ದ್ಯಾವಾ ಪೃಥಿವಿಯ ಮೊದಲರ್ಧವಾದ ನೀರದದಲ್ಲಿ ನೆಲದಿಂದ ನಭಕ್ಕೆ ಹಾಯ್ದ ಆದರ್ಶೋನ್ಮುಖ ದೃಷ್ಟಿಯಿದೆ. ಉತ್ತರಾರ್ಧವಾದ 'ಇಳಾಗೀತ'ದಲ್ಲಿ ಇದರ ತದ್ವಿರುದ್ಧವಾಗಿ ಮುಗಿಲಿನಿಂದ ಮಣ್ಣಿಗೆ ಕಣ್ಣು ಹೊರಳಿದೆ. ಬೆಳಗಾವಿಯಿಂದ ದಿಲ್ಲಿಗೆ ವಿಮಾನಯಾನಗೈದ ಅನುಭವ ಇಲ್ಲಿ ಮೂರ್ತಗೊಂಡಿದೆ. ಮೇಲೆ ಹಾರುತ್ತಿರುವಾಗ ಕೆಳಗೆ ನೋಡಿದರೆ ಕಾಣುವುದು :

ಭೂಗೋಲ ಹಾಯಾಗಿ ತುಸು ಗೋಚರ
ಅಲ್ಲಲ್ಲಿ ಕಾಡಿಗೆಯ
ರೇಖೆಗಳ ಶಾಖೆಗಳ
ಮಸುಕು ಎಸಕ
ಅಂದ ಚೆಂದ
ಶೃಂಗಗಳ ಚೇತರಿಸಿ ತಲೆಯೆತ್ತಿದೆ
ಆ ಚಿರಂತನ ರಜನಿ ಜಲಧಿಯೊಳಗಿಂದ !

ತ್ರಿವಿಕ್ರಮರ ಆಕಾಶಗಂಗೆ, ತ್ರಿಶಂಕುವಿನ ಪ್ರಜ್ಞಾ ಪ್ರಭಾತ, ಸಮುದ್ರ ಗೀತಗಳು, ಭಾರತಸಿಂಧು ರಶ್ಮಿ ಕಾವ್ಯಗಳಂತೆ ದ್ಯಾವಾ ಪೃಥ್ವಿಯಲ್ಲೂ ಪುರಾಣಗಳಿಂದ ಕವಿ ಪ್ರತಿಮೆಗಳನ್ನೂ ಪ್ರಸಂಗಗಳನ್ನೂ ಧಾರಾಳವಾಗಿ ಬಳಸಿಕೊಳ್ಳುತ್ತಾರೆ. ಆರಂಭದ ನೀರದ ಭಾಗದಲ್ಲಿ ಇದನ್ನು ನೋಡಿದ್ದೇವೆ. ಅಂತ್ಯದ ಇಳಾಗೀತದಲ್ಲೂ ಇದು ಢಾಳಾಗಿ ಕಾಣಿಸುತ್ತದೆ. ನರರು ನೆಲದಮೇಲೆ ಬರುವ ಮೊದಲು ಭೂಮಿ ಬೆಳೆದುಬಂದ ಬಗೆ ತಿಳಿಸು ವಾಗ ದಶಾವತಾರಗಳನ್ನು ಪ್ರಸ್ತಾಪಿಸುತ್ತಾರೆ–ಮತ್ಸ್ಯ ಕೂರ್ಮ ವರಾಹ ಅವತಾರಗಳನ್ನು ಹೇಳಿ ಅದರೊಂದಿಗೆ ವೈಜ್ಞಾನಿಕ ವಿವರಣೆಯನ್ನೂ ಸೇರಿಸುತ್ತಾರೆ. ವರುಣ ಮರುತರು ಭೂಮಿಯನ್ನು ರೂಪಿಸಿದ ರೂವಾರಿ ಗಳೆಂಬುದನ್ನು ನೆನೆಯುತ್ತಾರೆ.

ತುಂಬ ಎತ್ತರದಿಂದ ನಿಂತು ಕೆಳಗೆ ಬಾಗಿದಾಗ, ಮಾನವ ಕ್ರಿಮಿ ಕೀಟ ಪ್ರಾಣಿಗಳು, ಕಾಣದೆ, ಮೇದಿನಿ ಶಾಂತ ಧ್ಯಾನಮಗ್ನೆಯಾಗಿ ತೋರುತ್ತದೆ. ಮನುಷ್ಯ ಪೃಥ್ವಿಯ ಮೇಲೆ ಬಂದ, ನೆತ್ತರೋಕುಳಿ ಆಯಿತು, ಹತ್ತು ಅವತಾರಗಳನ್ನು ಎತ್ತಿದರೂ ನೆತ್ತರ ಧಾರೆ ನಿಲ್ಲಲಿಲ್ಲ. ಡಾಕಿನಿಯರ ನರ್ತನ, ಭಯಾರ್ತರ ಆರ್ತನ ಕೇಳುತ್ತಲೇ ಇದೆ. ಯುದ್ಧಗಳ ಪರಂಪರೆ ನಡೆದೇ ಇದೆ. ಇವನ ಮಹಿಮೆಯೂ ಅಪಾರವಂತೆ ಎಂದು ರವಿ ಶಶಿತಾರೆಗಳು ಚುಚ್ಚುತ್ತವೆ. 'ಭೂಮಿತಾಯ ಪ್ರಾಣಪದಕ'ವಾಗಿ ಮಾನವ ಅವತರಿಸುತ್ತಾನೆಂಬ ಬೆಳಕು ನಂದಿಲ್ಲ :

ಸುವರ್ಣಭೂಮಿ ವಿಸ್ತಾರ ಮಧ್ಯದಲ್ಲಿ
ಯಮುನೆಯಲ್ಲೊಗೆದು ತಂದ
ಗಿಳಿ ಹಸುರು ಬಣ್ಣದಾ ಸೀರೆಗಳನೊಣಗಲೆಂದು
ಗೋಪಿಯರು ಹಾಸಿದಂದ !
ಇಲ್ಲ ಗೋಪಿಯರಿಲ್ಲಿ ಇಲ್ಲ ಶ್ರೀಕೃಷ್ಣನಿಲ್ಲಿ !
ಓಡಿದರೊ ಎಲ್ಲಿಗೋಟ !
ದುಕೂಲಗಳು ಮಾತ್ರ ಬಿಸಿಲಿನಲ್ಲಿ ಕಂಗೊಳಿಸಿವೆ
ಬೃಂದಾವನದೀ ನೋಟ !

ಪುರಾಣ ಪ್ರಪಂಚವನ್ನು ದಾಟಿ ಆಧುನಿಕ ಲೋಕಕ್ಕೆ ಬರುತ್ತೇವೆ. ಮುಂಬಯಿ ಭಾರತದ ಮಹಾ ನಗರ. ಯಂತ್ರ ನಾಗರಿಕತೆ ಕೊಟ್ಟ ವಿಷಮತೆಯ ಬಳುವಳಿ ಇಲ್ಲಿ ಚೆನ್ನಾಗಿ ಚಿಗುರಿದೆ. ಇಂಥ ವಿಷಮತೆ ವಿಷಾದಕ್ಕೆಡೆಗೊಟ್ಟು ವಿಡಂಬನೆಯಲ್ಲಿ ಹೊರಹೊಮ್ಮಿದೆ ಕೃತಕತೆ, ಥಳುಕು, ಟೊಳ್ಳು ಜನರನ್ನು ಆಳತೊಡಗಿದೆ :

ರಿಬ್ಬನ್ನಿನ ರಸ್ತೆಯ ಸುಳಿವನು ಹಿಡಿದು
ಬಸ್ಸು ಟ್ರಾಮುಗಳು
ಎಡಬಲ ಗೊಂಬೆಯ ಮಹಡಿಮನೆ ; ನಡುವೆ
ರಿಮೂಂಡು ಹೋಮುಗಳು
ಕೋಣೆಗೊಂದು ಕಾಮಾರ್ಥದ ದಾಂಪತ್ಯ
ಕಲಿಯ ಪಾರುಪತ್ಯ !
ಕಲೆ ತಾ ಹೂಡಿದ ಮೂರೆಲೆಯಾಟವಿದು;
ಗೊಂಬೆಯ ಬೇಟವಿದು !

ವಿಜ್ಞಾನ ಮಾನವನಿಗೆ ವರವನ್ನೂ ಶುಭವನ್ನೂ ಕರುಣಿಸಿದೆಯೆಂಬುದೂ ಸುಂದರವಾಗಿ ಬಂದಿದೆ. 'ಮಣ್ಣ ಮುಗಿಲುಗಣ್ಣು, ಸಪ್ತಲೋಕದಡಿಮುಡಿಯಿದು ಹಿಡಿದಿಹ ಮಣ್ಣು' ಎಂದು ಮಣ್ಣಿನ ಹಾಡೂ

ಹೊಮ್ಮಿದೆ ಭಾವಗೀತೆಯಾಗಿ, ಮರ್ತ್ಯವನ್ನು ಬಿಟ್ಟರೆ ಮಾನವ ಕೆಟ್ಟ:

ಮರ್ತ್ಯದಲ್ಲಿ ನಿಂತು ಗೆಲ್ಲು
ಮರ್ತ್ಯವೆ ಒರೆಗಲ್ಲು;
ನೆಲವೆ ಆಧಾರಾ,
ನೆಲವೆ ಆ–ಧಾರ!

ಸಮುದ್ರ ಗೀತಗಳು ಕಾವ್ಯದ ಪರಿಚಯ ಮುಗಿದ ಕೂಡಲೆ ದ್ಯಾವಾ ಪೃಥಿವಿಯನ್ನು ಆರಿಸಿಕೊಂಡಿರುವುದರ ಉದ್ದೇಶ ಸ್ವಯಂ ಸ್ಪಷ್ಟವಾಗಿದೆ. ದ್ಯಾವಾಪೃಥಿವಿ ಕಾವ್ಯದ ರಚನೆಯಲ್ಲಿರುವ ಸಾವಯವತೆ, ಶೈಲಿಯಲ್ಲಿರುವ ನಾಟ್ಯಮಯತೆ ಸ್ಥಾಯಿಯಾಗಿಲ್ಲ. ಅದು ಅಲ್ಲಲ್ಲಿ ಹೊಳೆಯುತ್ತ ಧಾವಿಸುವ ಮಿಂಚಿನ ಸಂಚಾರ. ಸಮುದ್ರ ಗೀತಗಳು ಕಾವ್ಯ ಒಟ್ಟಾರೆ ಉಂಟುಮಾಡುವ ತನ್ಮಯತೆಯ ಔನ್ನತ್ಯಕ್ಕೆ ದ್ಯಾವಾ ಪೃಥಿವಿ ದ್ವಿತೀಯ ಸ್ತರದಲ್ಲಿ ನಿಂತುಬಿಡುತ್ತದೆ.

ಅಭ್ಯುದಯ (1946) ಹನ್ನೆರಡು ಕವಿತೆಗಳ ಜತೆಗೆ 71 ಸುನೀತಗಳು ಇರುವ ಮಧ್ಯಮ ಕಾವ್ಯ. ಸಾನೆಟ್ಟುಗಳನ್ನು ಅಷ್ಟಷಟ್ಪದಿ, ಚತುರ್ದಶಪದಿ ಎಂದು ಆಗಿನವರು ಕರೆದಿದ್ದರು. ಸುನೀತವೆಂದು ನಾಮಕರಣ ಮಾಡಿದ ಆದ್ಯರು ವಿನಾಯಕರು. ಇದರಲ್ಲಿನ 'ಚಂದ್ರ ಗ್ರಹಣ' ಎಂಬ ಕವಿತೆಯಲ್ಲಿರುವ ನವ್ಯತೆಯ ಅಂಕುರಾರ್ಪಣವನ್ನು ವಿಮರ್ಶಕರು ಗುರುತಿಸಬೇಕು. ಮುಂದೆ ಬಂದ '**ನವ್ಯಕವಿತೆಗಳು**' (1950) ಸಂಕಲನದ ಹದಿನೇಳು ಕವಿತೆಗಳ ವೇಳೆಗೆ ಆಗಲೇ ಪೂರ್ವಭಾವಿ ತಯಾರಿ ನಡೆದಿತ್ತು.

ಕಲೋಪಾಸಕ (1934) ಪ್ರಕಟವಾದ ಮೇಲೆ, ಇಜ್ಜೋಡು (1935) ಕಾದಂಬರಿ ಬಿಟ್ಟರೆ, **ಪಯಣ** (1937), **ಸಮುದ್ರ ಗೀತಗಳು** (1940) ಮತ್ತು '**ತ್ರಿವಿಕ್ರಮರ ಆಕಾಶಗಂಗೆ**' (1945)–ಇವು ಕ್ರಮವಾಗಿ ಎರಡನೆಯ ಮೂರನೆಯ ಮತ್ತು ನಾಲ್ಕನೆಯ ಕವಿತಾ ಸಂಗ್ರಹಗಳು, ಅಭ್ಯುದಯ ಅಯ್ದನೆಯದು. ಈ ಹನ್ನೆರಡು ವರ್ಷಗಳಲ್ಲಿ ಕವಿ ಸಾಕಷ್ಟು ಮುನ್ನಡೆದಿದ್ದರು. ಇಂಗ್ಲೆಂಡಿಗೆ ಹೋಗಿ ಬಂದಿದ್ದರು. ಇಂಗ್ಲಿಷ್ ಸಾಹಿತ್ಯದ ಜಾನ್ ಮಿಲ್ಟನ್, ಸ್ಪೆನ್ಸರ್ ಮೊದಲಾದ ಕವಿಗಳ ಪ್ರಭಾವ ಗಾಢವಾಗಿತ್ತು. ಸಹಜವಾಗಿಯೇ ಅಭ್ಯುದಯ ಸಂಕಲನದ ಸುನೀತಗಳಲ್ಲಿ ಆಂಗ್ಲ ಕವಿಗಳ ಛಾಯೆ ಕಾಣು ತ್ತೇವೆ. ಒಂದು ಸುನೀತವನ್ನು ಉದ್ಧರಿಸಬಹುದು :

ಈಕೆ ನನ್ನ ಯಶೋದೆ. ಇವಳೆನ್ನ ಸಲಹುವಳೊ
ನಾನಿವಳ ಸಲಹುವೆನೊ ನನಗರಿದು. ಕೈಯೆತ್ತಿ
ರೆಕ್ಕೆಯೊಲು ಬಡಿದಾಗ, ಕಣ್ಣರಳಿಸ ಹತ್ತಿ
ಕುಲುಕುಲನೆ ನಗುವಾಗ,—ಇವಳೆ ಅನುಭವಿಸುವಳೊ
ಹಿರಿದಾದ ಸಂತಸವ, ನಾನೊ ? ಇದು ನನಗರಿದು.
ಕೇಕಿಯನು ಹಾಕುವಳು ಕುಣಿದು ಕಳೆಯೇರುತಿರೆ,—
ಉಭಯತರು ನಲಿಯುವೆವು ಬಾಳ ಭಯವನು ಮರೆದು.

ಇಂತು ನಲಿವ ಯಶೋಧೆ ಬೆಳೆದು ದೊಡ್ಡವಳಿರಲು
ಯಾರ ಮನೆ ದೀವಿಗೆಯ ಹಚ್ಚಿ ಸಂತಸದಿಂದ
ಒಲಿಯುವಳೊ ನಾ ಕಾಣೆ ! ತುಸುವೆ ಕೊಂಕಿರೆ ಕುರುಳು
ಮೆಲುಗಾಳಿಸೋಂಕಿಂದ, ನಲುಮೆಯುತ್ಸವದಿಂದ
ಬುದ್ಧಿ ತುಸು ಮಂಕಾಗೆ, ಮನವಿತ್ತು ಮುತ್ತೈದೆ–
ಯಾಗಿ ನಿಂತಿರಲಿವಳು ;— ಯಾರ ಮನೆಯ ಯಶೋದೆ ?

(ಪುಟ 62)

ಈ ಸುನೀತದೊಂದಿಗೆ 'ಕೆಎಸ್‌ನ' ರವರ ತುಂಗಭದ್ರೆ ಎಂಬ ಕವಿತೆಯನ್ನು ಹೋಲಿಸಬಹುದು. ಅಭ್ಯಾಸಿಯ ಟಿಪ್ಪಣಿಗಳೊಂದಿಗೆ ಪ್ರಕಟವಾಗಿರುವ **ಊರ್ಣನಾಭ** (1961) ಅಯ್ವತ್ತು ಕವಿತೆಗಳ ಸಂಗ್ರಹ. ಇಲ್ಲಿಯೂ ಅರವಿಂದರ ತಾತ್ವಿಕತೆ ಬೆಸೆದುಕೊಂಡಿದೆ; ಉದ್ಧರಣ, ಅವತರಣ, ಪರಿವರ್ತನ, ಅತಿಮಾನಸ, ಭವಿಷತ್ತಿನ ನಿಶ್ಚಿತ ಹೊಳಹು, ನೂತನ ಪುರಾಣಕತೆ–ಇತ್ಯಾದಿ. ಹೊಸ ಮಾನವ ಭವಿತವ್ಯದ ಅನಿವಾರ್ಯತೆಯನ್ನು ಬರಮಾಡಿ ಕೊಳ್ಳಬೇಕು, ಅನುಭವಿಸಬೇಕು. ಊರ್ಣನಾಭವೆಂದರೆ ಜೇಡ. ಜೇಡನು ತನ್ನ ಮೂಲ ನೆಲೆಗೆ ಮರಳುವಂತೆ ಲೋಕವ್ಯವಹಾರ ನಡೆದಿದೆ. ಅಜ್ಞಾನಜಾಡ್ಯ ಮತ್ತು ಜಗದ ದೈತ್ಯಶಕ್ತಿಯ ಪ್ರತೀಕವಾಗಿರುವ ಊರ್ಣನಾಭ ನಿಗೆ ಮಾನವ ಔತಣ ನೀಡಕೂಡದೆಂದು ಬುದ್ಧಿ ಹೇಳು ವುದು ಕವಿಯ ಆಶಯ. ಕವಿಯು ಕರೆಗಂಟೆ ಬಾರಿಸುತ್ತದೆ:

'ಜೀವನ್ಮೃತನೇ ! ಎದ್ದೇಳು !
ವಾಯುದೇವ ಬಂದ
ಜೇಡದ ಬಲೆಗಳು ಚಲ್ಲಾಪಿಲ್ಲಿ
ವಿಮೋಚನೆಯ ತಂದ
ಇನ್ನೀ ನೂಲೆಳೆ ಕರುಳ್ಗೊಲೆ ಸಾಕು :
ಬಾಳು ಬೆಳೆಯಲೆಂದ

ಎಣ್ದೆಸೆಗಳ ಕಾಂತಿಯೆಸದಿಹುದು
ದೋಷರಹಿತವಾಗಿ ;
ಕುರುಡುನಂಬುಗೆಯ ಕುರಡುವಿಚಾರದ
ಜಾಲಕಗಳ ನೀಗಿ
ಪೂರ್ಣ ವಿಕಾಸದ ಅರುಣಾರುಣ ರಥ–
ವೇರಿ ಮುಂದೆ ಸಾಗಿ

x x x

ಆದಿಜೀಡ ನಡೆದಿವೆ ಹಾಲ್ಗಡಲಿಗೆ
ಬಂದ ಹಾದಿ ಹಿಡಿದು
ಕಡಲಿನ ಕೆಳಗಣ ಶಿಲೆಯ ಹೊದರಿನಲಿ
ಆಸರೆಯನು ಪಡೆದು
ಮತ್ಸ್ಯದ ಕೌತಣವಿತ್ತಿರಬೇಡ
ತಪ್ಪುದಾರಿ ನಡೆದು

ಇಲ್ಲಿಯೇ ಪರಿಚಯಿಸಬೇಕಾದ ಇನ್ನೊಂದು ಕಾವ್ಯ **ಉಗಮ** (1955). ಇದು ಹದಿನಾರು ಅಧ್ಯಾಯಗಳ ಕವನವಿರುವ 52 ಪುಟಗಳ ಚಿಕ್ಕ ಕೃತಿಯಾದರೂ ಪರಮಾತ್ಮನ ದಿವ್ಯಕರುಣಾತತ್ವ ಇಲ್ಲವೆ ಮಾತೃ ತತ್ವ ವನ್ನು ಗರ್ಭೀಕರಿಸಿಕೊಂಡಿರುವ ಪುಟ್ಟ ಕಾವ್ಯವಾಗಿದೆ. ವ್ಯಕ್ತಿಯು ಸಾಹಸದಿಂದ ಬೀಗದ ಸಮರ್ಪಣೆಯಿಂದ ವಿನೀತನಾದರೆ ಪರಾಮಾತೆ ಪ್ರೀತಳಾಗುವಳೆಂಬುದು ಕವಿಯ ಸಂದೇಶ.

ಊದು ! ಕಹಳೆಯೂದು !
ಎಲ್ಲ ಅನ್ಯಾಯದೊಡನೆ ಯುದ್ಧವನ್ನು ಸಾರು
ಕಿತ್ತೊಗೆ ಎಲ್ಲ ಜಾತಿ-ಮತಗಳ ಬೇರು
ಸನಾತನ ಸಂಕಟಗಳನ್ನು
ವಿನೂತನ ವಿವಂಚನೆಗಳನ್ನು
ಪರಂಪರೆಯ ಪರಿಪರಿ ಯಾತನೆಗಳನ್ನು
ಎಲ್ಲವನ್ನು ತರಿದೊಗೆ ;
ಗೆಲ್ಲಲಿ ಪ್ರೇಮ : ನಿಲ್ಲಲಿ ಹಗೆ

ಅಧಿಕಮನ ಅಥವಾ ಉನ್ಮನವು (over mind) ಹೊನ್ನಗಿಂಡಿಯಂತೆ ಪರಾಮಾತೆಯ ಶಕ್ತಿಯನ್ನು ಒಳ ಗೊಳ್ಳಬೇಕೆನ್ನುತ್ತಾರೆ. ಈ ಭಾಗ ತಾತ್ವಿಕ ಜಿಜ್ಞಾಸೆ ಯಿಂದ ಕೂಡಿ ಅರವಿಂದರ ಶಿಷ್ಯರಿಗೆ ಪ್ರಿಯವಾಗುತ್ತದೆ,

ಕಾವ್ಯ ಪ್ರೇಮಿಗಳಿಗೆ ನಿರಾಶೆಯಾಗುತ್ತದೆ. ನನ್ನ ಹೇಳಿಕೆಯನ್ನು ಪುಷ್ಟಿಸುವ ಭಾಗಗಳು ಎಲ್ಲೆಡೆ ಸಿಗುತ್ತವೆ:

ನಿನ್ನ ಅಖಂಡಧವಲಾಮಲ ಜ್ಯೋತಿ
ಉನ್ಮನ ರಾಜ್ಯದಲ್ಲಿ ಸ್ವರ್ಣಪಾತ್ರೆಯಂತೆ ಹೊಳೆಯಿತು ;
ಏಕಮೇವವಿದ್ದುದು ಅನೇಕ ಗರ್ಭಿತವಾಗಿ–
ಒಂದೇ ಸಲಿಲದ ನೂರು ಸೆಳೆತುಗಳಾಗಿ–
ನಾಮ-ರೂಪ-ಗುಣಗಳ ಅಮೃತ ಬಿಂದುಗಳಿಂದ ಕೂಡಿ
ಪ್ರವಹಿಸಿತು

x x x

ಸ್ಫುರಣದ ರಾಜ್ಯದಲ್ಲಿ ಮಿಂಚಿನಂತೆ ಹೊಳಪುಗೊಂಡಿತು,
ಬಣ್ಣ–ಬಣ್ಣದಾಟವಾಡಿತು : ಚಿತ್ತರವಡೆದಿತು
ಪ್ರಕಾಶಿತಮನದಲ್ಲಿ ಇನ್ನೂ ವಿಸ್ತಾರಗೊಂಡು
ಸ್ಫಟಿಕ ಶುಭ್ರವಾದುದು ಲೋಲಕದಂತೆ ರಂಗುರಂಗಾಗಿ
ತುಂಬಿ ಹರಿಯಿತು
ಉಚ್ಚತರಮನದ ನೆಲೆಯಲ್ಲಿ ಬುದ್ಧಿಗಮ್ಯ
ಪ್ರಜ್ಞೆಯಾಯಿತು.

ಅರವಿಂದರು ತೋರಿದ ಹಾದಿಯಲ್ಲಿ ಹೊರಟ ವಿಚಾರ ಧಾರೆಯನ್ನೊಳಗೊಂಡ ಪದ್ಯಗಳು ಹಿಗಂ (1950) ಎಂಬ ಕವಿತಾ ಸಂಕಲನದಲ್ಲೂ ಇವೆ. ಮೂವತ್ತುಮೂರು ಕವಿತೆಗಳ ಈ ಸಂಕಲನದಲ್ಲಿ ಮಾಹೇಶ್ವರಿ ಮಹಾಕಾಳಿ ಮಹಾಲಕ್ಷ್ಮಿ ಮಹಾಸರಸ್ವತಿ-ಚತುರ್ಮುಖಿ ಮಹಾಮಾತೆಯು ಕವಿಗೆ ‘ಪರಾಪ್ರಕೃತಿ’ ಯಾಗಿ ದರ್ಶನ ಕೊಡುತ್ತಾಳೆ :

ಮಾಹೇಶ್ವರಿಯೆ ! ನಿನ್ನ ಶಾಂತಿಯೇ ಶಾಂತಿ
ಮಹಾಂಕಾಳಿ ! ನೀ ತಂದ ಕ್ರಾಂತಿಯೇ ಕ್ರಾಂತಿ
ಓ ಮಹಾಲಕ್ಷ್ಮಿ ! ನೀ ತೋರ್ವ ಚೆಲುವು–

ಅದುವೆ ಪೂರ್ಣವು ಅದಕೆ ಧಾವಿಸುವದೊಲವು
ಓ ಸರಸ್ವತಿ ! ನನ್ನ ಬಾಳಿನಂಬರಕೆ
ಚಿಕ್ಕೆಯಿಡು, ಸಿಂಗರಿಸು. ಇದೆ ನನ್ನ ಹರಕೆ
ನನ್ನ ಕಾಣಿಕೆಯುಲ್ಪ,-ಬರಿ ಒಂದು ಹೃದಯ
ನನ್ನ ಹೃತ್‌ಪದ್ಮದಲಿ ಬರಲಿ ನಿನ್ನುದಯ

ಬಾಳದೇಗುಲದಲ್ಲಿ (1953) ಪ್ರಕಟನೆಗೆ 1947ರ ಸ್ವಾತಂತ್ರ್ಯೋತ್ಸವದ ವೇಳೆಗಾಗಲೆ ಅಣಿಯಾಗಿದ್ದ 43 ಕವನಗಳ ಸಂಕಲನ. ಅನ್ಯತ್ರ ಕಾಣುವ ಜೀವನ ಜಿಜ್ಞಾಸೆ ಇಲ್ಲಿ ದಟ್ಟವಾಗಿ ಗಟ್ಟಿಯಾಗಿ ಕಾಣುತ್ತದೆ. 'ಮುಗ್ಧತೆಯಿಂದ ಪೂರ್ಣತೆಯವರೆಗಿನ ವ್ಯಕ್ತಿತ್ವದ ಪದರುಗಳನ್ನು ತೆರೆದು ತೋರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ' ಯೆಂದು ಕವಿಯ ನಿವೇದನೆಯಿದೆ. ವ್ಯಕ್ತಿ ಜೀವನದ ವಿವಿಧ ಸೋಪಾನಗಳನ್ನು, ಮಗುವು ತನದಿಂದ ಮುಪ್ಪಿನತನಕ ಬೆಳೆಯುತ್ತಾ ಬರುವ 'ವ್ಯಕ್ತಿ'ಯ ಚಿತ್ರಣವನ್ನು ಕಂಡರಿಸಿದ್ದಾರೆ.

ಪಂಚಭೂತಗಳು ಸಂಚಯಿಸಿ
ಸಂಭವಿಸಿದ ಸಂಗಮವೇ ಜೀವನ

x x

ಇನ್ನು ಮಾನವ ಬರಲಿ ನನ್ನ ಮಾನಸ ಪುತ್ರ
ಈ ಅದ್ಭುತಕ್ಕೆ ಕಳಸವಿಡಲು ಬರಲಿ

ಹೀಗೆ ಸೃಷ್ಟಿ ಕರ್ತನ ಕರುಣೆಯಿಂದ ದೃಷ್ಟಿ ಪಡೆದ ಸತ್ವದ ಆವಿಷ್ಕಾರವಾದ 'ವ್ಯಕ್ತಿ ಕಂಗೊಳಿಸುವನು ವಿಶ್ವಮಂದಿರಕಿಟ್ಟ ಹಿರಿಯ ಹೊಂಗಳಸವಾಗಿ'. ಮಗು, ತರುಣ, ಕುಮಾರಿ, ಮದುವಣಿಗ, ಪತಿ–ಸತಿ, ತಾಯಿ–ತಂದೆ, ಕನ್ನಡಿಗ, ಕ್ರಾಂತಿಕಾರ, ತ್ಯಾಗಿ, ದಾನಿ,

ಸಮತಾವಾದಿ, ಸತ್ಯಾಗ್ರಹಿ, ಕರ್ಮಯೋಗಿ, ವಿಜ್ಞಾನಿ, ರಸಿಕ, ಕವಿ, ಅನುಭಾವಿ–'ವ್ಯಕ್ತಿ'ಯು ಹಲವು ಪರಿಗಳು ಇಲ್ಲಿ ಅಭಿವ್ಯಕ್ತಗೊಂಡಿವೆ. ಬಾಳದೇಗುಲದಲ್ಲಿ ಎಂಬ ಶೀರ್ಷಿಕೆ ಔಚಿತ್ಯ ಪೂರ್ಣವಾಗಿದೆ.

ಮಗುವು ಬಂದಾಡಿತ್ತು ಗುಡಿಯ ಪ್ರಾಂಗಣದಲ್ಲಿ ಮುಗ್ಧ
ನಯನಗಳ ತೆರೆದು
ವಾತ್ಸಲ್ಯ–ಪ್ರಕೃತಿಯೈಸಿರಿಯಲ್ಲಿ ಮುಕ್ತಿಯನು ಕಂಡುಳಿದು
ದನ್ನು ತೊರೆದು

x x

ಓ ತರುಣ ! ಎದ್ದೇಳು ! ನಿನ್ನ ಮೊರೆಯಲ್ಲಿ ಹುಮ್ಮಸ್ಸಿದೆ
ನಿನ್ನ ಕಣ್ಣಿನಲ್ಲಿ ಅಸಾಧಾರಣ ತೇಜಸ್ಸಿದೆ
ನಿನ್ನ ಹಣೆಯಲ್ಲಿ ಭವ್ಯತೆಯಿದೆ. ಗದ್ದದ ಕುಣಿಯಲ್ಲಿ
ದಿವ್ಯತೆಯಿದೆ
ಎತ್ತರದ ನಿಲುವಿನಲ್ಲಿ ಸಂಕಲ್ಪವಿದೆ. ತುಟಿಯ ತುದಿಯಲ್ಲಿ
ಆದೇಶವಿದೆ
ನಿಡುದೋಳ್ಗಳಲ್ಲಿ ನವಖಂಡವನ್ನೆ ತೂಗುವ ಬಲವಿದೆ
ಅಡಿಯಲ್ಲಿ ಬಿಡುಗಡೆಯಿದೆ
ಓ ತರುಣ ! ಎದ್ದೇಳು ! ನಿನ್ನ ರಾಜ್ಯವನ್ನಾಳು !

ವ್ಯಕ್ತಿಯ ಬೆಳವಣಿಗೆಗೆ ಅಡ್ಡಿ ಒಡ್ಡುವ ಸಮಾಜ ಹಾಗೂ ಸಾಮಾಜಿಕ ಆತಂಕಗಳನ್ನು ಹೆಸರಿಸುವುದನ್ನು ಕವಿ ಮರೆಯುವುದಿಲ್ಲ.

ಓ ಸಮಾಜ ! ವ್ಯಕ್ತಿ ಬರಿಯ ಕೂಲಿಯಾಳಲ್ಲ
ನಿನ್ನ ಯಂತ್ರವ್ಯೂಹಕ್ಕೆ ಬರಿ ಮೊಳೆಯಲ್ಲ !
ರಾಜಕಾರಣಿಗಳ ಗರಡಿ ಮನೆಯಾಗಿ
ಒಳಸಂಚಿಗರ ಕಾರಸ್ಥಾನದ ಕಮ್ಮಟವಾಗಿ
ಆಳರಸರ ನಾಟ್ಯರಂಗವಾಗಿ, ಅಸಹಾಯಕರ ಸ್ಮಶಾನವಾಗಿ

ಡಾಂಬಿಕರ ಮಂತ್ರಶಾಲೆಯಾಗಿ
ಸತ್ಯ-ಸೌಂದರ್ಯ-ಕಲ್ಯಾಣಗಳನ್ನು ಮೂಳೆಗುಂಪಾಗಿಸಿದ
ಸಮಾಜವೇ !
ಆಧಿ ಮಾನವನ ತೂಗುತೊಟ್ಟಿಲಾಗು

ಅದರಂತೆ ಸಮಾಜವನ್ನೆಚ್ಚರಿಸಿದ ಕವಿ ಸಂಸ್ಥೆಗಳನ್ನೂ ಪ್ರಸ್ತಾಪಿಸಿರುವುದೂ ಅರ್ಥಪೂರ್ಣವಾಗಿದೆ.

ವ್ಯಕ್ತಿಯನು ಪೋಷಿಸಲು
ಬೆಳೆದ ಸಂಸ್ಥೆಗಳಿಗಿಂತು
ಹೊಲವನ್ನೇ ಮೇಯುತಿಹ ಬೇಲಿಯಂತೆ
ವ್ಯಕ್ತಿಯನು ಹಿಮ್ಮೆಟ್ಟಿ
ನಿಂತಿರಲು ನಾಡಿನಲಿ-
ಕಣ್ಣಿಟ್ಟ ಗುರಿ ಬಂಡಿಗಾಲಿಯಂತೆ!

ಹಲವು ಕೃತಿಗಳಲ್ಲಿ, ಹಲವು ಕಡೆ ಪ್ರತಿಪಾದಿತವಾಗಿರುವ ಈ ಕವಿಯ ಜೀವಧ್ವನಿಯಂತಿರುವ ವಿವೇಕ, ಸಮನ್ವಯ ಸಿದ್ಧಾಂತ ಇಲ್ಲಿಯೂ ಹೊಳಲುಗೊಟ್ಟಿದೆ :

ನಂಬದಿರು ಒಂದೆ ಧರ್ಮವ ಒಂದೇ ಮಾರ್ಗವನು !
ಇಂಬುಗೊಡದಿರು ಯಾವುದೊಂದೆ ಶ್ರುತಿಗೆ !

X X X

ತೆಕ್ಕೆ ಬೀಳಾಸಗಕೆ ಎಲ್ಲ ದರ್ಶನಗಳಿಗೆ
ನೆಲವೆ ಒರೆಗಲ್ಲೆಂಬ ಶ್ರದ್ಧೆ ಬರಲಿ !

ಬಾಳದೇಗುಲದಲ್ಲಿ ಭಾವುಕವಾಗಿ ಸಾಗುತ್ತದೆ, ಮಾಗಿಯುತ್ತದೆ :

ಬಾಳ ಘನತೆಗಿಲ್ಲ ಸಾಟಿ !
ಬಾಳ ನುಳಿದ ಸ್ವರ್ಗವು ಸಹ
ಪತನ ಹೊಂದಲಿರುವ ದುರ್ಗವೆಂದು ಸಾರಿದೆ

'**ಕಲೋಪಾಸಕ**' ಅವರ ಮೊದಲ ಕವನ ಸಂಕಲನ (1934). ಮಹಾಕವಿ ಬೇಂದ್ರೆಯವರ ನುಡಿ– ಹರಕೆ ಹೊತ್ತು ಹೊರಬಂದ ಈ ಕೃತಿಯಲ್ಲಿ ಆರು ನೀಳ್ಗವಿತೆಗಳಿವೆ. ಈ ಸಂಗ್ರಹದ ಮತ್ತೊಂದು ವಿಶೇಷತೆಯೆಂದರೆ ಇದರ ಸಾವಿರ ಪ್ರತಿಗಳಿಗೂ ಓದುಗರ ಅಭಿಪ್ರಾಯ ಸಂಗ್ರಹಕ್ಕಾಗಿ ಒಂದೊಂದು ಪುಟವನ್ನು ಸೇರಿಸಿದ್ದು. ಅದರ ಇನ್ನೊಂದು ಉದ್ದೇಶ : ಕಾವ್ಯವನ್ನು ಓದುವ ರೀತಿ, ಕಾವ್ಯಾನುಭವವನ್ನು ಪಡೆಯುವ ರೀತಿ, ಕೃತಿಯ ಯೋಗ್ಯತೆಯನ್ನು ನಿರ್ಣಯಿಸುವ ರೀತಿ ಮುಂತಾದ ದಿಸೆಯಲ್ಲಿ ಒಂದು ವ್ಯವಸ್ಥಿತ ವಿಮರ್ಶಕ ಪ್ರತಿಕ್ರಿಯೆಯನ್ನು ಬರಮಾಡಿಕೊಳ್ಳುವುದು. ಇದು ಅವರು ಅಂದು ಮುಂದೆ ಬರೆಯಬೇಕೆಂದು ಹೊಂಚು ಹಾಕಿದ್ದ ವಿಮರ್ಶಾಶಾಸ್ತ್ರಗ್ರಂಥಕ್ಕೆ ಪೂರ್ವಪೀಠಿಕೆಯೆಂದು ಅಂದುಕೊಂಡಿದ್ದರು. ಹೇಗೆ ಓದುಗರು ಪ್ರತಿಕ್ರಿಯಿಸಿದರೆಂಬುದನ್ನು ಒಡೆದು ಹೇಳಬೇಕಾಗಿಲ್ಲ. ಆದರೆ ಈ ಕವಿ ಆಗ 25ರ ತರುಣ, ಕನಸುಗಣ್ಣ, ಹೊಸ ಹುರುಪಿನಿಂದ, ಓದಿನ ಮನೆಯಿಂದ ಬದುಕಿನ ಬಯಲಿಗೆ ಬಂದವರು. ಈ ಸಂಕಲನದಲ್ಲಿ ಸೇರಿರುವ '**ಸೆಳವು**' ಎಂಬ ನೀಳ್ಗವಿತೆ ಈ ಮೊದಲೆ ಜಯ ಕರ್ನಾಟಕದಲ್ಲಿ ಬೆಳಕು ಕಂಡಿತಲ್ಲದೆ 1930ರಲ್ಲಿ 16 ಪುಟಗಳ ಸಣ್ಣ ಪುಸ್ತಕವಾಗಿಯೂ ಹೊರಬಂದಿತ್ತು ; ಈ ನೀಳ ಕವಿತೆ ಶಕ್ತಿ–ವ್ಯಕ್ತಿಗಳ ಸಂಘರ್ಷವನ್ನು ವರ್ಣಿಸುತ್ತದೆ. ಆದರಿಂದ 'ಸೆಳವು' ಗಿಂತ 'ಕಲೋಪಾಸಕ' ವನ್ನು ಮೊದಲ ಕವನ ಸಂಗ್ರಹವೆಂದು ಹೇಳುವುದು ಉಚಿತವೆಂದು ಗ್ರಹಿಸಿದ್ದೇನೆ.

ಆದರ್ಶಯುವಕ ಗ್ರಹಿಸುವ ಪ್ರೀತಿಯು ದೈವಿಕತೆ ಅಮರತೆ ಸೌಂದರ್ಯ ಕಲ್ಪನೆ ಕೆಳೆತನ–ಇಂಥ ಅನುಭವ ಪರಂಪರೆ ಸ್ಥಾಯಿಯಾದ ಹತ್ತು ಅಧ್ಯಾಯಗಳ ಚಂಪೂಕಾವ್ಯ **‘ತ್ರಿವಿಕ್ರಮರ ಆಕಾಶಗಂಗೆ’** (1945). ಜೀವನಲಹರಿ, ಜೀವನ ಪರಿಚಯಂಕಷ್ಟೇ ಮುಂಗಿಯಿಂದ ಜೀವನ ವಿಕಾಸವನ್ನೂ ಭಾವಗೀತೆಯ ಓಘದಲ್ಲಿ ಚಿಮು ಕಿಸುತ್ತಾ ಸಾಗುವ ಈ ಕಾವ್ಯ ವೃಷ್ಟಿಯ ಅನುಭವವಷ್ಟೇ ಆಗಿ ಮುಗಿಯದೆ, ಕಡೆ ಕಡೆಗೆ ಸಮಷ್ಟಿಯ ಪ್ರಾತಿನಿಧಿಕ ಸ್ವರೂಪ ಪಡೆದುಕೊಳ್ಳುತ್ತದೆ. ಕವಿ ವ್ಯೋಮಗಂಗೆ ಯನ್ನು ಆಹ್ವಾನಿಸುವುದು ಹಿರಿಯದನ್ನು ಬಯಸುವುದರ ಸಂಕೇತವಾಗುತ್ತದೆ :

ಪಾವನಗಂಗೆ
ಅಮೃತತರಂಗೆ
ವ್ಯೋಮಾಂತರಂಗೆ
ನೆಲಕಿಳಿಯೆ !
ನೀರಡಸಿದಂಗೆ
ನೀರಾಸೆ ಹಿಂಗೆ
ಧವಲೋತ್ತುಂಗೆ !
ಹೊಳೆಹೊಳೆಯೆ ! (ಪುಟ 108)

ಗದ್ಯಪದ್ಯ ಸಮ್ಮಿಶ್ರವಾದ ವಿನೂತನ ವಸ್ತು–ಭಾವದ ಇನ್ನೊಂದು ಚಂಪೂ ಕಾವ್ಯ **‘ಇಂದಿಲ್ಲ ನಾಳೆ’** (1965) ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಪ್ರವಾಸ ಕಥನ. ಲೆಬನಾನ್, ರೋಮ್, ವಾಷಿಂಗ್‌ಟನ್, ಬಾಸ್ಟನ್-ಇಲ್ಲೆಲ್ಲ ಓದುಗರೂ ಲೇಖಕನೊಂದಿಗೆ ಪರ್ಯಟನ ಮಾಡಿದ ವಿಶಿಷ್ಟ ಅನುಭವ ಪಡೆಯುತ್ತಾರೆ. ಪ್ರವಾಸ ಪಥದಲ್ಲಿ ಸಂಗತಿಗಳಿಗೆ ಪ್ರತಿಕ್ರಿಯಿಸುತ್ತಾ

ಹೋಗುವ ಕವಿ ಮೈಕೆಲ್ ಏಂಜಲೋ ಸೃಷ್ಟಿ ನೋಡಿ ಉದ್ಗರಿಸುತ್ತಾರೆ-ಸತ್ತ ಮಗುವನದೊ ಎತ್ತಿಕೊಂಡಿಹಳು ಇಟಲಿಯ ತಿರುಕೊಳವಿನಾಚಿ. ವಾಷಿಂಗ್‌ಟನ್ ಮಹಾ ನಗರದ ಕಪ್ಪು ಬಿಳುಪುಗಳು ಕವಿಯ ಚಿಂತನೆಗೆ ವಸ್ತು ವಾಗುತ್ತವೆ :

ಇದೊಂದು ಟೆನಿಸ್ ಕೋರ್ಟು
ಒಂದೊಂದು ರಸ್ತೆಯೊಂದೊಂದು ಗೆರೆ
ಮಾಟಾಗಿ ನೀಟಾಗಿ, ಸಜ್ಜುಗೊಳಿಸಿದ ಟೆನಿಸ್ ಕೋರ್ಟಿನಂತೆ
ದೇಶಕ್ಕೆ ದೇಶವೆ ಸುವ್ಯವಸ್ಥಿತವಾಗಿದೆಯಿಲ್ಲಿ !
ಪ್ರಕೃತಿಗಿಲ್ಲಿ ಪೂರ್ಣ ಪ್ರಭುವಾಗಿದ್ದಾನೆ ಮಾನವ
ತನ್ನಕ್ಕರೆಯ ಮಕ್ಕಳೊಡನೆ
ಟೆನಿಸ್ ಆಡುವಳಿಲ್ಲಿ ಲಕ್ಷ್ಮೀದೇವಿ (ಪುಟ 21)

x x

ಬಡತನದ ಭೂತವನ್ನೊಯ್ದು
ಅಟ್ಲಾಂಟಿಕ್ ಸಾಗರದಲ್ಲಿ ಮುಳುಗಿಸಿದ್ದಾರೆ
ಗೃಹಕೃತ್ಯಗಳಿಗೆಲ್ಲ ಯಂತ್ರ ಭೃತ್ಯರನ್ನು ಹೂಡಿ
ಗೃಹಿಣಿ ದೇಶಕ್ಕಾಗಿ ದುಡಿಯುತ್ತಿದ್ದಾಳೆ (ಪುಟ 22)

x x

ದೀಪಕ್ಕಿದೆ ಬುಡಕ್ಕೆ ಕತ್ತಲೆ
ಮಹಾನಗರದ ಉತ್ತುಂಗ ಚಿಹ್ನವಾದ
ವಾಶಿಂಗ್‌ಟನ್ ವಿಜಯಸ್ತಂಭದಡಿಗೆ
ಶ್ಯಾಮಕಾಯರ ನೀರಸ ಜೀವನ ನಿಸ್ತೇಜ ನೇತ್ರ,
ಹೊಲಸು ಮನೆಗಳು
ಗಟಾರವಿಲ್ಲದೋಣಿಗಳು
ಹುಚ್ಚೆದ್ದು ಬೆಳೆದ ಹುಲ್ಲು
ಅಪರಾಧಗೈಯುವ ನಿರಪರಾಧಿ ಬಾಲಕರು,
ಭವಿತವ್ಯವೆರದ ಯುವಕರು,
ಬೇಸತ್ತ ತಂದೆ ತಾಯಂದಿರು !

ಇದು ಕತ್ತಲೆಯೆಂದು ಅದು ದೀಪವಾಯ್ತು
ಇವರು ಕಾರ್ಮಿಕರೆಂದು ಅವರು ಸ್ವತಂತ್ರರಾದರು
ಹುಣಸಿಕಾಯಿಯಂತೆ ಮನುಷ್ಯರನ್ನು ಮಾರುವುದುಂಟೆ ?
ಗಾಣದೆತ್ತಿನಂತೆ ಬವಣೆ ಬಡಿಸುವುದುಂಟೆ ?
ಉಂಟು ಉಂಟು ! (ಪುಟ 24-25)

ಅರಿಯದ ಆದಿವಾಸಿ ಮಕ್ಕಳನ್ನು ತಂದು ತಮ್ಮ ಮತಕ್ಕೆ ಸೇರಿಸಿಕೊಳ್ಳುವ ಪಾದ್ರಿಗಳ ಟೊಳ್ಳುತನವನ್ನು ಭೇಡಿಸುತ್ತಾರೆ : "ಬೇರೆ ಬೇರೆ ಮತಗಳ ಪಾದ್ರಿಗಳು ಹೋಗಿ ತಾಯಿ ತಂದೆಗಳ ಮನವೊಲಿಸಿ ಈ ಹುಡುಗರನ್ನು ಶಾಲೆಗೆ ಕರೆದು ತರುತ್ತಾರೆ. ಯಾವ ಪಾದ್ರಿಯು ಕರೆದು ತಂದನೋ ಅವನ ಮತವೇ ಆ ವಿದ್ಯಾರ್ಥಿಯದೆಂದು ಶಾಲೆಯ ರಿಜಿಸ್ಟರದಲ್ಲಿ ಬರೆಯಲಾಗುತ್ತದೆ. ಅಂದಿನಿಂದ ಅವನ ದಡ್ಡಿಗೆ ಒಂದು ಕುರಿ ಹೆಚ್ಚಾದಂತೆ. ಹೀಗಾಗಿ ಕೆಥೊಲಿಕ್, ಮೆಥಡಿಸ್ಟ್ ಮೊದಲಾದ ಕ್ರಿಸ್ತೀಯ ಪಂಗಡಗಳ ನಡುವೆ ಒಂದು ಜನಗಣತಿಯ ಸ್ಪರ್ಧೆ ಬಿದ್ದಿದೆಯೆಂದೇ ಹೇಳಬೇಕು. ಒಂದು ಕುಟುಂಬದಲ್ಲಿ ಜನಿಸಿದ ಮಾತ್ರಕ್ಕೆ ಮಗುವನ್ನು ಆ ಕುಟುಂಬದ ಮತ-ಧರ್ಮಗಳು ಬಂದು ಆವರಿಸುವವು. ಧರ್ಮದ ಹೆಸರಿನಲ್ಲಿ ಆಗುವ ಅಧರ್ಮಗಳಲ್ಲಿ ಇದು ಪ್ರಪ್ರಥಮವಾದುದು. ಆದರೆ ಶಾಲೆಗೆ ಕರೆದುಕೊಂಡು ಹೋದವರೇ ಧರ್ಮಗುರುಗಳಾಗುವುದು ಇಂತಹ ಅಧರ್ಮಕ್ಕೆ ಕಳಸ ಇಟ್ಟಂತೆಯೇ ಸರಿ." (ಪುಟ 178).

'ಭಾರತ ಸಿಂಧುರಶ್ಮಿ' ಡಾ॥ ವಿ. ಕೃ. ಗೋಕಾಕರ, ಇತ್ತೀಚೆಗೆ ಪ್ರಕಟವಾದ, ಹಿರಿಯ ಕೃತಿ. ಇದರಲ್ಲಿ ಎರಡು ಸಂಪುಟಗಳಿವೆ. ಒಂದನೆಯದರಲ್ಲಿ ಪೂರ್ವಾಪರ, ಉತ್ಸರ್ಪಣ, ಮನುಕುಲಹಂಸ, ಸಪ್ತಸಿಂಧು, ಕಾವ್ಯ

ಕುಬ್ಜ ನೃಪರಾಜಿ, ಎಂಬ ಆಯ್ದು ಕಾಂಡಗಳಿವೆ; ಎರಡನೆಯದರಲ್ಲಿ ಋಷ್ಯಾಶ್ರಮ, ದಾಶರಾಜ್ಞ, ಅಶ್ವಮೇಧ, ಭಾರತ ವಿಸ್ತರಣ, ತ್ರಿಶಂಕುಪ್ರಜ್ಞಾ, ಕ್ರಾಂತದರ್ಶನ, ಶರದಃ ಶತಮ್–ಎಂಬ ಏಳು ಕಾಂಡಗಳಿವೆ. ಅಂದರೆ ಎರಡು ಸಂಪುಟಗಳಿಂದ ಒಟ್ಟು ಹನ್ನೆರಡು ಕಾಂಡಗಳಿವೆ ಡೆಮ್ಮಿ $\frac{1}{8}$ ಆಕಾರದಲ್ಲಿರುವ ಈ ಕಾವ್ಯದಲ್ಲಿ ಒಟ್ಟು (573–762) 1335 ಪುಟಗಳಿವೆ. ಒಂದೊಂದು ಕಾಂಡದ ಪುಟ ಪ್ರಮಾಣ, ಅದರಲ್ಲಿ ನಿರೂಪಿತವಾಗಿರುವ ವಸ್ತುವಿನ ವ್ಯಾಪ್ತಿಯನ್ನು ಅವಲಂಬಿಸಿದ್ದು ಹೆಚ್ಚು ಕಡಮೆಯಾಗುವುದಾದರೂ, ಸರಾಸರಿ ಒಂದು ಕಾಂಡ ನೂರು ಪುಟಗಳಲ್ಲಿ ಅಳವಟ್ಟಿರುತ್ತದೆನ್ನಬಹುದು. ಇಷ್ಟು ದೊಡ್ಡ ಗಾತ್ರದ ಕಾವ್ಯ ಕನ್ನಡದಲ್ಲೇ ಅಲ್ಲದೆ ಉಳಿದ ಯಾವುದೇ ಭಾರತೀಯ ಭಾಷೆಗಳಲ್ಲಿ ಅಪರೂಪ. ಎಂಟು ವರ್ಷಗಳ ಪರಿಶ್ರಮದ ಫಲವಾಗಿ ಇದರ ಬರವಣಿಗೆ ಸಿದ್ಧವಾಗಿದ್ದರೂ ಅದಕ್ಕೂ ಹಿಂದಿನಿಂದ ಇದರ ಪರಿಭಾವನೆ ನಡೆದಿತ್ತೆಂದು ಲೇಖಕರು ಸೂಚಿಸಿದ್ದಾರೆ. ಭಾರತ ಸಿಂಧುರಶ್ಮಿ ಕಾವ್ಯದ ವಸ್ತು, ಸಾಮಾನ್ಯವಾಗಿ ಭಾರತೀಯ ಕವಿಗಳು ಆರಿಸಿಕೊಳ್ಳುವಂತೆ, ರಾಮಾಯಣ ಮಹಾಭಾರತದಿಂದ ಬಂದಿಲ್ಲ. ಇದರ ವಸ್ತುವನ್ನು ಋಗ್ವೇದದಿಂದ ತೆಗೆದುಕೊಳ್ಳಲಾಗಿದೆಯೆಂಬುದು ಈ ಕಾವ್ಯದ ವಿಶೇಷಗಳಲ್ಲೊಂದು.

"ಆದರೆ ಇದೊಂದು ಪ್ರಾಚೀನ ಸಂಸ್ಕೃತಿಗೆ ಮೀಸಲಾದ ಕೃತಿಯಲ್ಲ ವೈದಿಕಯುಗದ ಪುನರುಜ್ಜೀವನ ಕಾಲವನ್ನು ಚಿತ್ರಿಸುವಾಗ ಸಮಕಾಲೀನ ಯುಗದ

ನಾಡಿಯ ಮೇಲೂ ಈ ಕೃತಿಯು ಬೆಳಕಿಟ್ಟಿದೆ. ಇದನ್ನು ಕಾವ್ಯದ ತುಂಬ ಕಂಡುಕೊಳ್ಳಬಹುದು.

"ವಿಶ್ವವಿಶಾಲವಾದ ವರ್ಣನೆ, ಪರಿಸರದೊಡನೆ ಭೀಕರವಾದ ಹೋರಾಟ, ಹೃದಯವನ್ನೇ ಶುದ್ಧಗೊಳಿಸುವ ಪ್ರೇಮ, ವ್ಯಕ್ತಿತ್ವಕ್ಕೆ ಕಳಸವಿಡುವ ಅನುಭಾವದ ವಿವಿಧ ಪ್ರಕಾರಗಳು : ಇವೆಲ್ಲ ಇಲ್ಲಿಯ ಕಥಾವಸ್ತುವಾಗಿವೆ. ಎರಡು ನೂರರ ಮೇಲೆ ಪಾತ್ರಗಳಿದ್ದ ಈ ಕಾವ್ಯದಲ್ಲಿ ಸುಮಾರು ಇಪ್ಪತ್ತೈದು ವ್ಯಕ್ತಿಗಳು ಅಚ್ಚಳಿಯದೆ ಚಿದ್ರಂಗದ ಮೇಲೆ ಆಲೆದಾಡುತ್ತಾರೆ. ಅಷ್ಟಾದಶವರ್ಣನೆಯೆಂಬ ಪ್ರಾಚೀನ ಪರಂಪರೆ ಬರಿ ಒಂದು ಕವಿಸಮಯವಲ್ಲ. ಸಮಗ್ರ ಸೃಷ್ಟಿಯ ರೌದ್ರ-ಅದ್ಭುತವೆಲ್ಲ ಕಾವ್ಯದಲ್ಲಿ ಬರಬೇಕೆಂಬ ಆಕಾಂಕ್ಷೆ ಅದು. ನವರಸಗಳು (ಕವಿಯ ಅಭಿಪ್ರಾಯದಲ್ಲಿ ಹನ್ನೆರಡು) ಬರಿ ಒಂದು ಕೃತ್ರಿಮ ಸಂಖ್ಯಾಮಾಲೆಯಲ್ಲಿ ಮಾನವನಿಗೆ ಸಾಧ್ಯವಿದ್ದ ಎಲ್ಲ ಜೀವನ ದೃಷ್ಟಿಗಳ ರಸಾರ್ದ್ರ ಅಭಿವ್ಯಕ್ತಿ ಅವು. ಅವೆಲ್ಲ ಇಲ್ಲಿ ಇಂದಿನ ಕಾಲದ ಮೆಚ್ಚುಗನ್ನಡದಲ್ಲಿ ಅಭಿವ್ಯಕ್ತವಾಗಿವೆ.

"ಸಮಕಾಲೀನ ಜೀವನದ ಚಿತ್ರಣ ಹಾಗೂ ಮೌಲ್ಯೀಕರಣ ಇಲ್ಲಿ ಹೀಗೆ ವೈದಿಕ ವೇಷ, ಸಮಕಾಲೀನ ಭೂಷಣಗಳ ವ್ಯಂಗೀಕರಣ ಹಾಗೂ ಒಂದು ಸಮಗ್ರ ಆವರಣರೂಪಣದ ಕಾಂತಿಯನ್ನು ತಳೆದು ತಲೆಯೆತ್ತಿವೆ. ಒಂದು ಹೊಸ ತತ್ವ ಹಾಗೂ ದರ್ಶನಗಳು ಒಳಿತು-ಕೆಡಕುಗಳ ಚಿರಂತನ ಸಂಗ್ರಾಮವನ್ನು ಇಲ್ಲಿ ಹೀಗೆ ನವೋನವನಾಗಿಸಿವೆ. ಮಹಾ ಕಾವ್ಯದ ಮೈಕಟ್ಟಿನಲ್ಲಿ ಮೂಡಣ-ಪಡುವಣಗಳು ಸುಂದರವಾಗಿ ಬೆರೆತಿವೆ."

ಇವರ ಆಳವೂ ವಿಸ್ತಾರವೂ ಆದ ವಿಪ್ರಲಾಭ್ಯಯು ನದ ಬಗೆಗೆ ವಿಮರ್ಶನ ಪ್ರಜ್ಞೆಯ ವಿಚಾರದಲ್ಲಿ ಯಾವ ಅನುಮಾನಗಳೂ ಇಲ್ಲ. ಗೋಕಾಕರ ಇತರ ಕೃತಿಗಳನ್ನು ಅಧ್ಯಯನ ಮಾಡಿರುವ ನನಗೆ ಇವರ ಸೃಜನಶೀಲ ಸಾಮ ರ್ಥ್ಯದಲ್ಲಿ ಆದರವಿದೆ. ಇಷ್ಟು ಬೃಹತ್ ಪ್ರಮಾಣದ ಕೃತಿ ರಚನೆಗೆ ಇವರು ವಿನಿಯೋಗಿಸಿದ ತಾಳ್ಮೆ ಎಚ್ಚರ ವಿವೇಕ ಶ್ರದ್ಧೆ ಕುರಿತು ಅಪಾರ ಗೌರವವಿದೆ. ಈ ಸೃಜನ ಕಾರ್ಯದ ಹಿಂದೆ ಪ್ರವರ್ತವಾಗಿರುವ ಲೇಖಕರ ಪ್ರಾಮಾಣಿಕ ಕಳಕಳಿ ಸೌಮ್ಯನಸ್ಯ ಪ್ರಶಂಸನೀಯ ವಾದುದು. ಆದಿಮ ಮತ್ತು ಮಧ್ಯಯುಗೀನ ಸಂಸ್ಕೃತಿ ಯಲ್ಲಿ ಧರ್ಮಜೀವನವನ್ನು ರೂಪಿಸುವಲ್ಲಿ, ಸಾಮಾಜಿಕ ಸ್ಥಿತಿಗಳನ್ನು ನಿರೂಪಿಸುವಲ್ಲಿ ಹಾಗೂ ವಿವಿಧ ಹಂತಗಳ ಜೀವನ ವಿಕಾಸ ಪಾತಳಿಗಳನ್ನು ಅರ್ಥೈಸುವಲ್ಲಿ ಲೇಖಕರ ವಿವೇಚನೆ ಮತ್ತು ಗ್ರಹಿಕೆ ಮಹತ್ವದ್ದಾಗಿ ಕಾಣುತ್ತದೆ. ಭಾರತೀಯ ಸಂಸ್ಕೃತಿಯ ಸಮಗ್ರ ಅನುಭವದಲ್ಲಿ ಚಲಿ ಸುವ ಶಕ್ತಿಯ ಮೊತ್ತ ಹಾಗೂ ಈ ಕವಿಯ ಭಾಷೆಯಲ್ಲಿ ಸ್ಫೋಟಿಸಿರುವ ರೀತಿ ಮೌಲಿಕವೆನಿಸುತ್ತದೆ.

“ನನ್ನ ಕಾವ್ಯ ಇಂಥದೊಂದು ಕೃತಿಯ ಮಟ್ಟಕ್ಕೆ ಮೆಲ್ಲನೆ ಸಾಗಿತ್ತೆಂಬುದನ್ನು ಈ ಮೊದಲೇ ಇನ್ನೊಂದು ಸಂದರ್ಭದಲ್ಲಿ ಹೇಳಿದಂತೆ, ನನ್ನ ‘ತ್ರಿವಿಕ್ರಮರ ಆಕಾಶ ಗಂಗೆ, ಬಾಳ ದೇಗುಲದಲ್ಲಿ. ಇಂದಿಲ್ಲ ನಾಳೆ ಸಮರಸವೇ ಜೀವನ.” (ಫೀಲ್ಡಿಂಗ್ ಹೇಳುವಂತೆ ಕಾದಂಬರಿಯು ಒಂದು ಗದ್ಯ ಮಹಾಕಾವ್ಯ) ಎಂಬ ಕೃತಿಗಳಲ್ಲಿ ಗುರುತಿಸ ಬಹುದು’ ಎಂದು ಲೇಖಕ ಗೋಕಾಕರು ಅರಿಕೆ ಮಾಡಿ ಕೊಂಡಿದ್ದಾರೆ. ಇದರ ಜೊತೆಗೆ ಅವರ ದ್ಯಾವಾ

ಪೃಥಿವಿ, ಊರ್ಣನಾಭ ಮುಂತಾದುವನ್ನೂ ಸೇರಿಸ ಬಹುದು. ಈ ಎಲ್ಲ ಹಿಂದಿನ ಕೃತಿಗಳಲ್ಲಿ ಭಾರತೀಯ ಪುರಾಣೇತಿಹಾಸಗಳನ್ನು ಕಾವ್ಯಕ್ಕೆ ಅಳವಡಿಸಿಕೊಳ್ಳುವ ಪ್ರಯತ್ನ, ಪ್ರಯೋಗ ಹಾಗೂ ಹವಣಿಕೆ ಇರುವುದನ್ನು ಗಮನಿಸಬಹುದು. ಇವುಗಳನ್ನು ಪೂರ್ವ ಸಿದ್ಧತೆಯ ಕಾವ್ಯಗಳನ್ನಾಗಿ ಪರಿಗಣಿಸಿದರೆ ತಪ್ಪಾಗದು. ಗೋಕಾಕರು ಭಾರತ ಸಿಂಧುರಶ್ಮಿಯ ಕಡೆಯಲ್ಲಿ ಕೊಟ್ಟಿರುವ ಟಿಪ್ಪಣಿ ಮತ್ತು ಪುಸ್ತಕಗಳ ಸಹಾಯ ಸೂಚಿಯನ್ನು ನೋಡಿದಾಗ ಬೆರಗು ಮೂಡುತ್ತದೆ.

"ಭಾರತಸಿಂಧುರಶ್ಮಿ" ಮಹತ್ವಾಕಾಂಕ್ಷೆಯ ಕಾವ್ಯ. ಇದನ್ನು ವಿವರವಾಗಿ ವಿಮರ್ಶಾತ್ಮಕವಾಗಿ ಸಮಗ್ರವಾಗಿ ಓದಿದ ಮೇಲೆ ಮೂಡಿದ ಅನಿಸಿಕೆಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ. ತಮ್ಮ ವಿಸ್ತಾರವಾದ ಓದಿನಿಂದ ಹದಗೊಂಡ ಬ್ರಹ್ಮಾಂಡ ಸಾಮಗ್ರಿಯನ್ನು ಓದುಗರ ಮುಂದೆ ಹರಡಲಾಗಿದೆ. ಮನುಷ್ಯ, ಕಾಲ, ನಾಗರಿಕತೆ ಬದಲಾಗುತ್ತಾ ಬಂದುದನ್ನು ಪ್ರಭಾವಶಾಲಿಯಾಗಿ, ಘಟನೆ ಸಂಕೇತಗಳ ಮೂಲಕ ಪರಿಣಾಮಕಾರಿಯಾಗಿ, ತೋರಿಸಿದ್ದಾರೆ. ಮನುಷ್ಯನ ಸ್ವಭಾವ, ರಾಗದ್ವೇಷ, ಕನಸು ಹಂಬಲ, ಇನ್ನೊಬ್ಬರ ಮೇಲೆ ಅಧಿಕಾರ ಹೇರಿ ಸವಾರಿ ಮಾಡುವ ಸುಖಲಾಲಸೆ, ಸಾಮ್ರಾಜ್ಯ ವಿಸ್ತರಣಾಕಾಂಕ್ಷೆ ಮೊದಲಾದುವು ಯಶಸ್ವಿಯಾಗಿ ಪ್ರತಿಪಾದಿತವಾಗಿವೆ.

ಇಷ್ಟಾಗಿಯೂ ಈ ಕಾವ್ಯ ನಮ್ಮ ವಿಶಿಷ್ಟ ಅನುಭವ ಪ್ರಕ್ರಿಯೆಗೆ ದೂರವಾಗಿಯೇ ಉಳಿಯುತ್ತದೆ. ಇಲ್ಲಿನ ಬಹುಭಾಗ ಗರ್ಭೀಕರಿಸಿಕೊಂಡಿರುವ ವೈಭವ, ಯಾವ

ಸವಾಲುಗಳನ್ನೂ ನೀಡದೆ, ನಮ್ಮ ಅನುಭವ ಕ್ಷಿತಿಜದ ಆಯಾಮವನ್ನು ಮತ್ತು ತಿಳಿವಳಿಕೆಯ ಗಡಿಗಳನ್ನು ಅಂತಿಮವಾಗಿ ವಿಸ್ತರಿಸವೆ ಶಕ್ತಿಹ್ರಾಸಗೊಳುತ್ತದೆ. ವೈಚಾರಿಕ ಹಂತದಲ್ಲೇ ನಿರೂಪಣೆ ಹೆಚ್ಚಾಗಿ ಸಾಗುತ್ತದೆ. ಬೌದ್ಧಿಕತೆ ಬೇಡವೆಂದಲ್ಲ. ಅದು ಪ್ರಜ್ಞಾಪಾತಳಿಯನ್ನು ದಾಟಿ, ಸ್ಫೋಟಿಸಿ ಕಲಾತ್ಮಕವಾಗಿ ಬರಬೇಕು, ಕಾವ್ಯಾಂಶದಲ್ಲಿ ಕರಗಿ ಬರೆಯಬೇಕು. ಭಾರತ ಸಿಂಧುರಶ್ಮಿಯನ್ನು ಓದುತ್ತಾ ಓದುತ್ತಾ ಹಲವು ಸಲ ಚಕಿತಗೊಳ್ಳುತ್ತೇವೆಂಬುದು ನಿಜ. ಆದರೆ ಒಂದು ಶ್ರೇಷ್ಠ ಕಾವ್ಯದಿಂದ ದಕ್ಕುವ ಅಪರೂಪ ಮತ್ತು ಅನನ್ಯವೆನಿಸುವ ಅನುಭವ ಇಲ್ಲಿ ನಮ್ಮನ್ನು ಆವರಿಸಿಕೊಳ್ಳುವುದಿಲ್ಲ. ಬಹುಕಾಲ ನಮ್ಮನ್ನು ಗಾಢವಾಗಿ ಕಾಡುವಲ್ಲಿ, ಕನಸು ಮನಸುಗಳನ್ನು ಆವರಿಸಿಕೊಂಡು ಕಲಕುವುದರಲ್ಲಿ ಈ ಕಾವ್ಯ ವಿಫಲವಾದಂತೆ ತೋರುತ್ತದೆ.

ಪ್ರಾಚೀನ–ಆರ್ಷೇಯ ಪ್ರತೀಕಗಳನ್ನು ಸೃಜನಶೀಲವಾಗಿ ಬಳಸಿಕೊಂಡಿಲ್ಲ. ಎಲ್ಲ ಹಸಿ ಹಸಿಯಾಗಿ ರಾಶಿಯಾಗಿ ವರದಿಯಾಗಿದೆ, ಸಮನ್ವಯಗೊಂಡಿಲ್ಲ. ಕಾವ್ಯಸಿದ್ಧಿ ಪರಿಮಿತವಾಗಲಿರುವ ಕೊರತೆಗಳನ್ನು ಗುರುತಿಸಬಹುದು. ಪ್ರತಿಮೆಗಳನ್ನು ಬುದ್ಧಿಪೂರ್ವಕವಾಗಿ ಪೋಣಿಸುತ್ತಾರೆ. ಅವು ಕಾವ್ಯಬಂಧದಲ್ಲಿ ಹೊಂದಿಕೊಳ್ಳದೆ, ಬೆಸೆಯದೆ ಬಿರುಕು ತೋರಿ ಹೊರಗೇ ಉಳಿದುಬಿಡುತ್ತವೆ. ಪ್ರಾಸ ಪ್ರಿಯತೆ, ಶಾಬ್ದಿಕ ಬಡಬಡಿಕೆ ಭಾವ ಪ್ರಚೋದಕವಾಗದೆ, ಯಾವ ಔಚಿತ್ಯದ ಅರ್ಥ ನಿಯೋಗವನ್ನೂ ನಿರ್ವಹಿಸದೆ ಸೋಲುತ್ತದೆ. ಕಾವ್ಯಕ್ಕೆ ಬೇಕಾದ ಎಲ್ಲ ಲಕ್ಷಣಗಳೂ, ಬಂಧವೂ, ಅಚ್ಚುಕಟ್ಟೂ,

ಸಾವಯುವತೆಯೂ ಇಲ್ಲಿದೆ. ಆದರೆ ಕಾವ್ಯ ಎಲ್ಲಿದೆ ಎಂದು ಹುಡುಕುವಂತಾಗಿದೆ. ನಾವು ಕಾವ್ಯ ಓದು ತ್ತಿದ್ದೇವೆಯೊ ಅಥವಾ ಪುರಾಣನಾಮ ಚೂಡಾ ಮಣಿ ವಾಚನ ಮಾಡುತ್ತಿದ್ದೇವೆಯೊ ಎಂಬ ಭ್ರಮೆ ಆವರಿಸುತ್ತದೆ.

ಈ ಕಾವ್ಯ ತಾನು ಮಾಡಬೇಕಾದ ಪ್ರಭಾವವನ್ನು ಮಾಡದಿರುವುದಕ್ಕೆ ಓದುಗನ ಅಸಿದ್ಧತೆಯೇನಾದರೂ ಕಾರಣವೆ ಎಂಬ ಪ್ರಶ್ನೆಯೂ ಏಳಬಹುದು. ಏಕೆಂದರೆ ಈ ಕಾವ್ಯದ ವಸ್ತು ನಮಗೆ ಅಪರಿಚಿತವಾದುದ್ದು, ಹೆಸರುಗಳೂ ಬಳಕೆಯ ಪಳಕೆಯ ಮುಖಗಳದಲ್ಲ. ರಾಮಾಯಣ, ಮಹಾಭಾರತ, ಭಾಗವತಾದಿಗಳಲ್ಲಿ ಬೇರೂರಿದ ನಮ್ಮ ಬುದ್ಧಿ ಭಾವಗಳನ್ನು, ಅಲ್ಲಿಂದ ಬಿಡಿಸಿ ಇಲ್ಲಿಗೆ ತೊಡಗಿಸಿಕೊಳ್ಳುವಲ್ಲಿ ತೊಡಕು ತೊಡರು ಇರಬಹುದೆ ಎಂಬ ಪ್ರಶ್ನೆಗೂ ಉತ್ತರ ಕೊಡಬೇಕಾಗು ತ್ತದೆ. ಪ್ರಾರಂಭದ ನೂರಿನ್ನೂರು ಪುಟಗಳು ನಮ್ಮ ಸಹನೆಯನ್ನು ಪರೀಕ್ಷಿಸುತ್ತವೆ. ಪಟ್ಟುಹಿಡಿದು ಕೂತರೆ, ಕಾವ್ಯಕ್ಕೆ ತೊಡಗಿಸಿಕೊಂಡರೆ, ಆಮೇಲೆ ಇಡೀ ಕಾವ್ಯ ನಮ್ಮನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಅಲ್ಲದೆ ಒಡೆಸ್ಸಿ ಇಲಿಯಡ್, ಪ್ಯಾರಡೈಸ್ ಲಾಸ್ಟ್ ಮುಂತಾದ ನಮಗೆ ಅಪರಿಚಯದ ವಸ್ತುವಿರುವ ಮಹಾಕಾವ್ಯ ಗಳನ್ನೇ ಓದಿ ಮೆಚ್ಚುವುದು ಭಾರತೀಯರಿಗೆ ಸಾಧ್ಯವಿರುವಾಗ 'ಭಾರತ ಸಿಂಧುರಶ್ಮಿ'ಯನ್ನು ಅಸ್ವಾದಿ ದಿಸಲು ಹೊಸ ವಸ್ತು ಅಡ್ಡಿಯಾಗಲಾರದು.

ಸಮಗ್ರ ಭಾರತದ, ಪ್ರಾಚೀನ ಯುಗದ, ಸಾಂಸ್ಕೃತಿಕತೆ ಭೌಗೋಳಿಕತೆಯನ್ನು ತಬ್ಬಿಕೊಂಡಿರುವಷ್ಟೇ

ಬಿಗಿಯಾಗಿ ಕಾವ್ಯವನ್ನೂ ಅಪ್ಪಿಕೊಂಡಿದ್ದರೆ 'ಭಾರತ ಸಿಂಧು ರಶ್ಮಿ' ಕಾವ್ಯವಾಗಿ ಈಗ ಪಡೆದಿರುವುದಕ್ಕಿಂತ ಹೆಚ್ಚಿನ ಯಶಸ್ಸು ಪಡೆಯುವುದು ಸಾಧ್ಯವಿತ್ತು.

ಇಂದಿನ ಕನ್ನಡ ಸಾಹಿತ್ಯದ ಗೊತ್ತುಗುರಿಗಳು (1946) ಹದಿಮೂರು ಲೇಖನಗಳನ್ನೊಳಗೊಂಡಿದೆ : ಸಾಹಿತ್ಯಕ್ಕೆ ಸಂಸ್ಕೃತಿಯು ಒರೆಗಲ್ಲೂ, ಸಾಹಿತ್ಯ–ಕಾವ್ಯ, ಕಾವ್ಯದಲ್ಲಿ ವ್ಯಕ್ತಿತ್ವ ನಿರೂಪಣೆ, ಕಾವ್ಯದಲ್ಲಿ ಸ್ಫೂರ್ತಿ-ಸಾಧನೆಗಳು. ಹಾಸ್ಯ ವಿಡಂಬನೆ, ಗದ್ಯ-ಪದ್ಯ, ಸರಳ–ರಗಳೆ ಸ್ವಚ್ಛಂದ ಛಂದ. ಲೇಖಕನ ನಾಲ್ಕು ಮಾತುಗಳಲ್ಲಿ (ಪುಟ 11) ಅವರ ಅರಿಕೆ : "ವಿಮರ್ಶೆಯು ಶಾಸ್ತ್ರ ವಿದ್ದಂತೆ ಕಲೆಯೂ ಅಹುದು. ಸಾಹಿತ್ಯ ಕೃತಿಯನ್ನು ತೂಗಿ ನೋಡುವಾಗ ಬೇಕಾಗುವ ನ್ಯಾಯ ಬುದ್ಧಿಯ ಜೊತೆಗೆ ಕಲ್ಪಕತೆಯೂ ಸಹಾನುಭೂತಿಯೂ ಬೆರೆತು ಕೊಂಡಿರದಿದ್ದರೆ ವಿಮರ್ಶೆಯು ಅಭಿಪ್ರಾಯದ ಸಂತೆ ಯಾಗುತ್ತದೆ. ಕಲ್ಪಕತೆಗೆ ಮೀಮಾಂಸೆಯ ತಾಳಮೇಳ ವಿಲ್ಲದಿದ್ದರೆ ವಿಮರ್ಶೆಯು ಅರ್ಧಾಂಗವಾಯು ಹಿಡಿದ ದೇಹದಂತೆ ಅಸಮರ್ಥವಾಗುತ್ತದೆ. ಈ ಸಮನ್ವಯ ವನ್ನು ಸಾಧಿಸಿದ್ದ ವಿಮರ್ಶಕರು ಕವಿಗಳಾಗಬಲ್ಲರು ; ಕವಿಗಳು ವಿಮರ್ಶಕರಾಗಬಲ್ಲರು. ಇಂದಿನ ಉತ್ತಮ ಸಾಹಿತ್ಯದಲ್ಲಿ ಕಂಡುಬರುವ ಈ ಕವಿ ವಿಮರ್ಶಕ ಸಿದ್ಧಿಯ ಪರಂಪರೆ ಕನ್ನಡದ ಇನ್ನೂ ಹೆಚ್ಚಾಗಿ ಬೆಳಗಬೇಕಾಗಿದೆ".

ವಿಮರ್ಶೆಯ ವಿಚಾರದಲ್ಲಿ ವಿನಾಯಕರ ವಿಚಾರ ಧಾರೆ ಮತ್ತಷ್ಟು ಖಚಿತವಾಗಿ ಹರಳುಗೊಂಡಿರುವ ವಾಕ್ಯಗಳು– "ವಿಮರ್ಶೆಯು ವಿಚಾರಮಥನಕ್ಕಾಗಿ, ಸತ್ಯ ಶೋಧನಕ್ಕಾಗಿ, ಸೌಂದರ್ಯ ಬೋಧನೆಗಾಗಿ ; ಸಾಧ್ಯ

ವಿದ್ದಮಟ್ಟಿಗೆ ಅದು ಸಮಾಜದಲ್ಲಿ ವಿರಸಕ್ಕೂ ವೈಮನಸ್ಸಕ್ಕೂ ಕಾರಣವಾಗಿರಬಾರದು" (ಅದೇ, ಪುಟ. 10). ಇದು 1946 ರಲ್ಲಿ ಹೊರಬಂದ ಹೊತ್ತಗೆಯಾದರೂ ಇದರಲ್ಲಿ 1928 ರಿಂದ ಬರೆದ ಬರಹ ಸೇರ್ಪಡೆಯಾಗಿದೆ ಯೆಂಬುದನ್ನು ನೆನಪಿಗೆ ತಂದುಕೊಂಡರೆ ಇದರ ಚಾರಿತ್ರಿಕ ಮಹತ್ವ ಸ್ಪಷ್ಟವಾಗುತ್ತದೆ.

ಈ. ಪಿ ರೈಸರು ಇಂಗ್ಲಿಷಿನಲ್ಲಿ ಬಹಳ ಹಿಂದೆ ಬರೆದ 'ಕನ್ನಡ ಸಾಹಿತ್ಯ ಚರಿತ್ರೆ' ಎಂಬ ಪುಸ್ತಕದ ಕಡೆಯಲ್ಲಿ 'ಜಗತ್ತಿನ' ಜ್ಞಾನದ ದೃಷ್ಟಿಯಿಂದ ತೀರ ತುಸುಮಾತ್ರ, ಕನ್ನಡ ಸಾಹಿತ್ಯದಲ್ಲಿ ಸಂಚಯವಾಗಿದೆ, ಎಂಬರ್ಥದ ಅಭಿಪ್ರಾಯ ಮಂಡಿಸಿದ್ದಾರೆ. ಇದನ್ನು ವಿನಾಯಕರು ಖಂಡಿಸಿದ್ದಾರೆ: "ಸಾಹಿತ್ಯದಿಂದ ನಾವು ಅಪೇಕ್ಷಿಸುವುದು ಎಂತಹ ಜ್ಞಾನ? ಶಾಸ್ತ್ರೀಯ ವಿಜ್ಞಾನವೇನು ಅಥವಾ ಇತರ ವಿವಿಧ ವಿಷಯಗಳೇನು? ಅಲ್ಲವೆ ಅಲ್ಲ. ಇನ್ನು ನೂತನವಾದ ವಿಚಾರಗಳ ಸಂಚಯ ವೆನಬೇಕೆ, ಯಾವ ವಿಚಾರವು ಪೂರ್ಣವಾಗಿ ಹೊಸ ದಾಗಿರುವುದು? ಎಲ್ಲ ವಿಚಾರಗಳೂ ಬುನಾದಿ ಕಾಲದಿಂದ ಇಳಿದು ಬಂದುವೇ. ನವೀನತೆಯು ವಿಚಾರಗಳಲ್ಲಿರು ವುದಿಲ್ಲ; ಆದರೆ ಅವು ಪುನರುಜ್ಜೀವನವನ್ನು ಪಡೆದ ಜೀವನ ಕ್ಷೇತ್ರದಲ್ಲಿರುವವು. ಹಾಗೆ ನೋಡಿದರೆ ಷೇಕ್ಸ್ ಪಿಯರನು ಜಗತ್ತಿಗೆ ಯಾವ ಹೊಸ ವಿಚಾರವನ್ನು ಕೊಟ್ಟನು? ಶೆಲ್ಲಿಯ ಸೌಂದರ್ಯ ಪ್ರತೀತಿಯೂ ಸ್ವಾತಂತ್ರ್ಯದ ಕಲ್ಪನೆಯೂ ಇನ್ನುಳಿದ ಕವಿಗಳಲ್ಲಿ ಇದ್ದಿಲ್ಲ ವೇನು? ದೇಶ ಕಾಲಾನುಸಾರವಾಗಿ ಆ ವಿಚಾರಗಳ ಸ್ವರೂಪದಲ್ಲಿ ಮಾತ್ರ ತುಸು ಭೇದವಾಗಬಹುದು ಇಷ್ಟೆ" (ಪುಟ. 7)

ಈ ವಾಕ್ಯಗಳ ಜತೆಗೇ ಓದಬೇಕಾದ, ಮನನ ಮಾಡಬೇಕಾದ ಸಾಲುಗಳು : "ನಮ್ಮ ವಾಙ್ಮಯವು ಸಂಸ್ಕೃತದಷ್ಟು ವಿಶಾಲವಾಗಿರಲಿಕ್ಕಿಲ್ಲ ; ಇಂಗ್ಲಿಷಿನಷ್ಟು ಆಳವಾಗಿರಲಿಕ್ಕಿಲ್ಲ. ಆದರೆ ಅವುಗಳಿಗಿದ್ದ ಜೀವಕಳೆಯೇ ನಮ್ಮ ವಾಙ್ಮಯಕ್ಕೂ ಇದೆ. ಸೌಂದರ್ಯದಲ್ಲಿಯೂ ಸಂಸ್ಕೃತಿಯಲ್ಲಿಯೂ ನಮ್ಮಲ್ಲಿ ಕಡಮೆಯೇನು ಇಲ್ಲ. ಆಂಗ್ಲ ಸಾಹಿತ್ಯವಾದರೂ 14ನೇ ಶತಮಾನದವರೆಗೆ ಏನಿತ್ತು ? ಅದು ಕೇವಲ ಸಾಂಪ್ರದಾಯಿಕ ಮಾರ್ಗ ದಲ್ಲಿಯೇ ಬೆಳೆಯಿತು. ಆದರೆ ಇಷ್ಟರಲ್ಲಿಯೇ ಕರ್ನಾಟಕ ದಲ್ಲಿ ಅನೇಕ ವಿಚಾರಕ್ರಾಂತಿಗಳ ಯುಗಗಳಾಗಿ ಹೋಗಿ ದ್ದವು. ತಿರುಳಿನಲ್ಲಿಯೂ ಶೈಲಿಯಲ್ಲಿಯೂ ನವೀನತೆಯು ಬಂದೊದಗಿತ್ತು. ಮಹಾಕಾವ್ಯಗಳನ್ನು ಮೊದಲು ಗೊಂಡು ಭಾವಗೀತೆಗಳವರೆಗೆ ಎಲ್ಲ ಬಗೆಯ ಪ್ರಗತಿಯೂ ಕಂಡುಬರುತ್ತಿತ್ತು" (ಅದೇ ಪುಟ. 6)

ವಿಮರ್ಶೆ ಕ್ಷೇತ್ರದಲ್ಲಿ ವಿನಾಯಕರದು ದೊಡ್ಡ ಹೆಸರು. ಅವರು ಅತ್ತ ಹಳಗನ್ನಡ, ಇತ್ತ ಹೊಸ ಗನ್ನಡ, ಉತ್ತ ಪಶ್ಚಿಮದ ಸಾಹಿತ್ಯ ಇಷ್ಟನ್ನೂ ಆಳ ವಾಗಿ ಅಧ್ಯಯನ ಮಾಡಿ ಉತ್ತಮ ಸಾಹಿತ್ಯದ ನೆಲೆ ಬೆಲೆಗಳನ್ನು ಕರತಲಾಮಲಕವಾಗಿಸಿಕೊಂಡವರು. ಸಾಹಿ ತ್ಯದ ಶ್ರೇಷ್ಠತೆಯನ್ನು ಗುರುತಿಸುವ ಶಕ್ತಿ ಅವರಿಗೆ ವಾಚೋವಿಧೇಯವಾಗಿತ್ತು. ಹೀಗಾಗಿ ಅವರ ಕೊಡುಗೆ ಯನ್ನು ಕಡೆಗಣಿಸುವಂತಿಲ್ಲ. ಅವರು ಮಾಡಿರುವ ವಿಪುಲವಾದ ವಿಮರ್ಶಾತ್ಮಕ ಬರವಣಿಗೆ ರಾಶಿಯಲ್ಲಿ ಗಣ್ಯಭಾಗ ನವ್ಯತೆ ಕುರಿತದ್ದು. ಕನ್ನಡದಲ್ಲಿ ನವ್ಯ ಕಾವ್ಯದ ಆರ್ಭಯಿಯವಾದ ಅವರಿಂದ ಈ ಬರವಣಿಗೆ

ಬಂದದ್ದು ಸಹಜ. ಸುಮಾರು ಎರಡು ದಶಕಗಳ ಕಾಲಘಟ್ಟದಲ್ಲಿ ನವ್ಯತೆ ಹಾಗೂ ನವ್ಯ ಕಾವ್ಯ ಕುರಿತ ಕೆಲವು ಲೇಖನಗಳು **'ನವ್ಯತೆ'** (1975) ಸಂಕಲನದಲ್ಲಿ ಸೇರ್ಪಡೆಯಾಗಿವೆ. ಇದಕ್ಕೆ ಪೂರಕವಾದ ಮತ್ತಷ್ಟು ಬರಹ **'ನವ್ಯತೆ ಹಾಗೂ ಕಾವ್ಯಜೀವನ'**ದಲ್ಲೂ ಇದೆ.

ನವ್ಯತೆ ಕುರಿತ ಅವರ ವಿವೇಚನೆಯ ಆರಂಭದಲ್ಲಿ ಹೇಳಬೇಕಾದ ಮಾತು ಅವರು ತಮ್ಮ ಕಾವ್ಯ ಪದ್ಧತಿಯನ್ನು ನವ್ಯವೆಂದೂ, ಅಡಿಗರದನ್ನು ಅತಿನವ್ಯವೆಂದೂ ಕರೆದಿದ್ದಾರೆ: "ನವ್ಯತೆಯನ್ನು ಕುರಿತು ನಾನು ಮೊದಲನೆಯ ಸಲ ಮಾತನಾಡಿದಾಗಿನಿಂದ ಅತಿನವ್ಯತೆಯ ರೀತಿಯನ್ನು ಪ್ರಧಾನವಾಗಿಸದೆ ನಾನು ಮಾತನಾಡಿದ್ದೆ. ಅತಿನವ್ಯತೆಯ ಆರಾಧನೆಯಿಂದ ಹುಟ್ಟಿದ ಅತಿರೇಕಗಳಷ್ಟೆ ನವ್ಯವಲ್ಲವೆಂಬುದನ್ನು ಸ್ಪಷ್ಟಗೊಳಿಸಬೇಕಾಗಿತ್ತು. ಅಲ್ಲದೆ ಅತಿನವ್ಯವೊಂದನ್ನು ಬಿಟ್ಟು ಉಳಿದ ಬರವಣಿಗೆಯ ವಿಷಯದಲ್ಲಿರುವ ಅಸಹನೆಯ ಅಸಾಧುತ್ವವನ್ನು ಅಲ್ಲಗಳೆಯಬೇಕಾಗಿತ್ತು". (ಮುನ್ನುಡಿ, ಪುಟ 3). ಹದಿನಾರು ಮೌಲಿಕ ಲೇಖನಗಳಿರುವ 'ನವ್ಯತೆ' ವಿನಾಯಕರ ವಿಮರ್ಶನ ಧೋರಣೆ ದೃಷ್ಟಿ ತೋರಿಸುವ ರನ್ನಗನ್ನಡಿ. ನವ್ಯ ಸಾಹಿತ್ಯದ ಪ್ರಮೇಯಗಳಿಗೆ ಇದು ವಿಶ್ವಾಸರ್ಹ ಕೈಪಿಡಿ. ನವ್ಯ ಪಂಥದ ಮುಖವಾಣಿಯಾಗಿ ಎಷ್ಟೋ ವಕ್ತಾರರು ವ್ಯಾಖ್ಯಾನ ಕೊಟ್ಟಿದ್ದಾರೆ. ಅಂಥ ಉದ್ಘೋಷಗಳಲ್ಲಿನ ಇತಿಮಿತಿಗಳನ್ನು ಕನ್ನಡಿಸಿ, 'ಅತಿ' ಗಳಿಗೆ ಕತ್ತರಿ ಹಾಕಿ, ಅದರ ಮುಖ್ಯ ಲಕ್ಷಣಗಳನ್ನು ನಮ್ಮ ಪರಂಪರೆಯ ಪಕ್ಕದಲ್ಲಿಟ್ಟು ಸೋದಾಹರಣವಾಗಿ ಪ್ರತಿಪಾದಿಸಿರುವ

ಪುಸ್ತಕ–ನವ್ಯತೆ. ಇದರಿಂದ ನಾಲ್ಕು ಉದಾಹರಣೆ ಕೊಡಲಿಚ್ಛಿಸುತ್ತೇನೆ:

1. ನವ್ಯ ಕಾವ್ಯವೆಂದರೆ ಸ್ವಾನುಭವ ಸಂಶೋಧನೆಯ ದಾರಿಯೆಂದೂ ಸಂತೃಪ್ತಿಯ ಮಾರ್ಗವೆಂದೂ ಸ್ವಸಾಕ್ಷಾತ್ಕಾರದ ಮೋಡಿಯೆಂದೂ ನಾವು ಕೇಳುತ್ತೇವೆ. ಯಾವ ಕಾಲದ ಯಾವ ಒಳ್ಳೆಯ ಕವಿ ಈ ಮಾತನ್ನು ನಡೆಯಿಸಿಕೊಂಡು ಬಂದಿಲ್ಲ? ಒಳ್ಳೆಯ ಕಾವ್ಯದ ಎಲ್ಲ ಲಕ್ಷಣಗಳನ್ನು ಸಂಗ್ರಹಿಸಿ ಅವುಗಳ ಮೇಲೆ 'ನವ್ಯತೆ'ಯ ಮುದ್ರೆಯನ್ನು ಒತ್ತಲು ಹೋದರೆ ಹಾಸ್ಯಾಸ್ಪದವಾದೀತು. ಅಂತೇ ನವ್ಯ ಕಾವ್ಯಮಾರ್ಗ ಒಂದು ತಂತ್ರದ ವಿಶಿಷ್ಟತೆಯಲ್ಲಿಯೇ ಹೊರತು ಯಾವುದೊಂದು ವಿಶಿಷ್ಟ ಜೀವನ ದೃಷ್ಟಿಯಲ್ಲಿಲ್ಲವೆಂದು ಹೇಳಬೇಕಾಗಿದೆ. ಇಂತಹ ತಂತ್ರ ಕಾವ್ಯದ ಇತಿಹಾಸದಲ್ಲಿ ಆಗೀಗ ಕಾಣಿಸಿಕೊಳ್ಳುತ್ತದೆ. ತನ್ನ ಯುಗದ ಆವರಣವನ್ನು ಹೊಂದಿಕೊಂಡು ಬರುತ್ತದೆ. ವಚನಗಳ ಕಾವ್ಯತಂತ್ರ ಇದು ಸರ್ವಜ್ಞನ ತ್ರಿಪದಿಗಳ ತಂತ್ರ ಇದು. ಯುಗದ ಆವರಣದಂತೆ ಅದರಲ್ಲಿ ಬೇರೆ ವಿಶೇಷಗಳು ಬೆರೆಯುತ್ತವೆ ಇಂದಿನ ಯುಗದಲ್ಲಿ ಈ ತಂತ್ರ 'ನವ್ಯತೆ' ಯಾಗಿ ಮೂಡಿದೆ (ಪುಟ 48).

2. ಕವಿಗಾಗಲಿ ಸುಸಂಸ್ಕೃತನಿಗಾಗಲಿ ಸಮಕಾಲೀನ ಪ್ರಜ್ಞೆ ಅವಶ್ಯ. ಅದಿಲ್ಲದೆ ಅವನು ತನ್ನ ಯುಗದ ಕವಿ ಇಲ್ಲವೆ ಸುಸಂಸ್ಕೃತನಾಗಲಾರ. ಬರಿ ತನ್ನ ಯುಗದಲ್ಲಿಯೇ ಹುದುಗಿಕೊಂಡು ಸಮಕಾಲೀನ ಪ್ರಜ್ಞೆಯೊಂದಕ್ಕೆ ಶರಣು ಹೋಗಿ – ಜೀವನದ ಚಿರಂ

ತನ ಇಲ್ಲವೆ ಸಾರ್ವತ್ರಿಕ ಅಂಶಗಳನ್ನು ಗ್ರಹಿಸದಿದ್ದರೆ ಅವನ ಕವಿತ್ವ ಇಲ್ಲವೆ ಸುಸಂಸ್ಕೃತತೆಗೇ ಒಂದು ರೀತಿಯಿಂದ ಭಂಗ ಬಂದೀತು. ಆದರೆ ಅನುಭಾವಿಗಳು ಹೀಗೆ, ಪ್ರಗತಿಪರರ ಹಾಗೆ, ನವ್ಯ ಕವಿಗಳು ಮಾತ್ರ 'ಇಡಿ' ಎಂಬ ಗುತ್ತಿಗೆ ಯಾವ ಒಂದು ಮಾರ್ಗಕ್ಕೇ ಅನ್ವಯಿಸಲಾರದು. ಕಾವ್ಯಶಾಸ್ತ್ರದಲ್ಲಿ ಇಂತಹ ವಾದ ತಲೆ ಎತ್ತಿದರೆ ಅದರಲ್ಲಿ ರಾಜಕಾರಣದಲ್ಲಿಯಂತೆ ರಾಡಿಯೂ 'ಪಾರ್ಟಿ' ನೀತಿಯೂ ಹುಟ್ಟಬಲ್ಲದೆ ಹೊರತು ಕಾವ್ಯರಾಧನೆ ಮುಂದುವರಿಯಲಾರದು. ಕಾವ್ಯಪ್ರಜ್ಞೆ ಕವಿಯಾದ ಎಲ್ಲರ ಸೊತ್ತು, ಎಲ್ಲ ಕವಿಗಳ ಗುತ್ತಿಗೆ. ನವ್ಯತೆ ಒಂದು ತಂತ್ರ ಇಲ್ಲವೆ ಒಂದು ಪದ್ಧತಿಯಾಗಬಲ್ಲದು. ರಚನಾವಿಧಾನ, ಪ್ರತಿಮಾವಿಧಾನ, ಶೈಲಿಯ ಪಾಕ – ಇವುಗಳಲ್ಲಿ ಒಂದು ವಿಶಿಷ್ಟತೆಯನ್ನು ತೋರಿಸಬಲ್ಲದು. ಈ ಪದ್ಧತಿಯನ್ನು ಸಹ ಒಬ್ಬೊಬ್ಬ ಕವಿ ಒಂದೊಂದು ರೀತಿಯಲ್ಲಿ ಬೆಳೆಯಿಸುವುದನ್ನು ನಾವು ಕಾಣುತ್ತೇವೆ. ವಸ್ತು ಸ್ಥಿತಿ ಹೀಗಿರುವಾಗ 'ನವ್ಯತೆ'ಗೆ ಒಂದು ವಿಶಿಷ್ಟ ಜೀವನ ದೃಷ್ಟಿಯನ್ನು ಆರೋಪಿಸಲು ಹೋಗಿ ನಾವು ಒಂದು ಕಾವ್ಯಮಾರ್ಗಕ್ಕೆ ನಮ್ಮ ಸ್ವಂತದ ದೀಕ್ಷೆಯನ್ನು ಕೊಡಲು ಹವಣಿಸಿದಂತಾಗುತ್ತದೆ ಇದೇನು ಕಾವ್ಯಜೀವನಕ್ಕೆ ಪೋಷಕವಾದ ಮಾತಲ್ಲ (ಪುಟ 50–51)

3. ತುಲನಾತ್ಮಕ ವಿಮರ್ಶೆ ನಮ್ಮಲ್ಲಿ ಸರಿಯಾಗಿ ನೆಲೆಗೊಂಡಿಲ್ಲ. ಓರ್ವ ಸಾಹಿತಿಯನ್ನು ತೆಗಳುವದಿದ್ದರೆ ಅವನ ಓರ್ವ ಸರ್ವ ಸಾಧಾರಣ ಕೃತಿಯನ್ನು ಆಯ್ದುಕೊಂಡು ಅದನ್ನು ನಾವು ಹೊಗಳಬೇಕೆಂದಿರುವ

ಸಾಹಿತಿಯ ಶ್ರೇಷ್ಠ ಕೃತಿಯೊಡನೆ ಗಾತ್ರ, ವಸ್ತು ಮುಂತಾದ ಅಂಗಗಳಲ್ಲಿ ಹೆಚ್ಚಿನ ಭೇದವಿದ್ದರೂ - ಹೋಲಿಸಿ ನೋಡಿ ನಮ್ಮ ಇಚ್ಛೆಯನ್ನು ನಾವು ಪೂರೈಸಿ ಕೊಳ್ಳುತ್ತೇವೆ. ನೈಜ ತುಲನಾತ್ಮಕ ವಿಮರ್ಶೆಯಲ್ಲಿ ವಸ್ತು ಪ್ರಧಾನ ತುಲನೆಗಾಗಿ ನಿಸರ್ಗದಂತಹ ಒಂದು ವಸ್ತುವನ್ನು ಕುರಿತು ಬರೆದ ಬೇರೆ ಬೇರೆಯವರ ಕಾವ್ಯ ವನ್ನು ಹೋಲಿಸಿ ನೋಡಬಹುದು. ಶೈಲಿಯನ್ನು ಹೋಲಿಸಿ ನೋಡುವುದಾದರೆ ಆಧುನಿಕ ಹಾಗು ಕಾವ್ಯ ಶೈಲಿಯಲ್ಲಿ ಕಂಡುಬರುವ ವಿವಿಧ ಪ್ರಕಾರಗಳನ್ನು ಗುರು ತಿಸಬಹುದು. ಒಂದು ಕೃತಿಯ ಇಲ್ಲವೆ ಓರ್ವ ಸಾಹಿ ತಿಯ ಅನನ್ಯ ಸಾಹಿತ್ಯ ಗುಣವನ್ನು ಅನುಭವಿಸಲೆಂದೆ ತುಲನಾತ್ಮಕ ವಿಮರ್ಶೆ ಸಹಾಯಕಾರಿಯಾಗುತ್ತದೆ (ಪುಟ. 142-143).

4. ಈ ನವ್ಯದೃಷ್ಟಿಯುಳ್ಳ ಸಾಹಿತಿ ಕೆಡಕು-ಅನ್ಯಾಯಗಳ ಬೇರನ್ನೇ ಕಿತ್ತು ತೋರಿಸುತ್ತಾನೆ. ಅವನ ದೃಷ್ಟಿ ವಿಶ್ವವಿಶಾಲವಾದುದು ; ಅಣುಸೂಕ್ಷ್ಮ ವಾದುದು. ಅಪೂರ್ಣತೆಯನ್ನು ಅವನು ವಿನೋದ ದಿಂದ ಎಚ್ಚರಿಸುತ್ತಾನೆ. ಯಾವ ಸಿದ್ಧಾಂತಕ್ಕೂ ಅವನು ಬಲಿ ಬೀಳುವುದಿಲ್ಲ; ಒಂದೊಂದು ವ್ಯಕ್ತಿ-ವಸ್ತುವಿನ ಅಂತರಾಳದಲ್ಲಿ ಹುದುಗಿದ್ದ ತತ್ವವನ್ನೇ ಅವನು ಎತ್ತಿ ತೋರಿಸುತ್ತಾನೆ. ಜೀವಜೀವನದಲ್ಲಿ ಹುದುಗಿದ್ದ ಸತ್ಯಪ್ರಿಯತೆ ಆನಂದ-ಪ್ರೇಮ-ತಪಸ್ಸು ಗಳನ್ನು ಅವನು ಪ್ರಚೋದಿಸುತ್ತಾನೆ. ನವ ಮಾನವನು ಬರೀ ತಪೋಧನನಲ್ಲ: ಬರಿ ಅಗ್ನಿಯ ಉಪಾಸಕನಲ್ಲ. ಕರ್ಮ ಕುಶಲತೆಯು ಅವನ ವ್ಯಕ್ತಿತ್ವದ ಒಂದು ಪೈಲು.

ಅವನು ಬರಿ ಜ್ಯೋತಿಯ ಆರಾಧಕನಲ್ಲ ; ಸತ್ಯಪ್ರಕಾಶ ಅವನು ಬಯಸಿದ ಅಮೃತಗಳಲ್ಲೊಂದು ಸತ್ಯದ ವಿರಾಟ್ರೂಪವನ್ನು ರೂಪಿಸಿ ತೋರಿಸಿ ವಿಶ್ವದ ಮಂಗಳ ಗೀತವನ್ನು ಹಾಡಲು ನಮ್ಮ ಸಾಹಿತಿಯು ಮನುಕುಲ ವನ್ನು ಅಣುಗೊಳಿಸುತ್ತಾನೆ. ಮಾನವ ಹೃದಯವು ಇಂದು ಹಾವಿನ ಹುತ್ತಾಗಿದೆ. ದ್ವೇಷ ಮದ-ಮತ್ಸರ ಗಳು ಅಲ್ಲಿ ಮನೆ ಮಾಡಿಕೊಂಡಿವೆ. ನಮ್ಮ ಸಾಹಿತಿಯು ಇಂಥ ಸರ್ಪಗಳ ಸರ್ಪಯಾಗವನ್ನು ಮಾಡುವ ಪರೀಕ್ಷಿತನಾಗಬೇಕಾಗಿದೆ. ಅವನು ಕಾಣುವ ದುಃಖಕ್ಕೆ ಸೀಮೆಯೇ ಇಲ್ಲ ; ಆದರೆ ಎಲ್ಲ ದುಃಖಗಳ ಹಿಂದೆ ಒಂದು ಶಾಶ್ವತ ಆನಂದವನ್ನು ಅವನು ಗುರುತಿಸುತ್ತಾನೆ. ಅವನು ತರುವ ಪ್ರೇಮದ ಪ್ರಶಾಂತ ಪ್ರಕಾಶದಲ್ಲಿ ಅರ್ಥ–ಕಾಮಗಳ ಸ್ವಾರ್ಥವೆಲ್ಲ ಬಯಲಾಗುತ್ತವೆ. ಅಧಿಕಾರ-ಸ್ವಾತಂತ್ರ್ಯಗಳು ಸರ್ವರ ಸೊತ್ತಾಗಲಿರು ವಂತೆ ಅರ್ಹತೆಯನ್ನೂ ಸಾಹಿತಿಯು ಮನೆ ಮನೆಗೆ ಬೀರಿ ಮನು ಕುಲವನ್ನು ಪಾವನಗೊಳಿಸಬೇಕಾಗಿದೆ ; ವಿಸ್ತಾರದ ಜೊತೆಗೆ ಆಳವನ್ನು ತಂದುಕೊಡಬೇಕಾಗಿದೆ. ನಾಗರಿಕತೆಯೊಡನೆ ಸಂಸ್ಕೃತಿಯನ್ನು ಬೆರಸಬೇಕಾಗಿದೆ. ಇದೊಂದೂ ಭಗೀರಥ ಪ್ರಯತ್ನ. ಆದರೆ ವ್ಯೋಮ ಗಂಗೆಯನ್ನು ಈ ರೀತಿ ಭೂಮಿಗಿಳಿಸದೆ ಅವನು ವಂಶೋದ್ಧಾರಕನಾಗಲಾರ ಸಾಹಿತ್ಯವು ಭಾಗೀರಥಿ ಯಾಗದೆ ಮನುಕುಲದ ಮುಕ್ತಿಕೇತನವು ನಲಿಯಲಾರದು (ಪುಟ. 26).

ಸಮುದ್ರದಾಚೆಯಿಂದ (ಮೂರನೆಯ ಮುದ್ರಣ 1972) ವಿನಾಯಕರು ವಿದೇಶಯಾತ್ರೆ ಕಾಲದ ದಿನಚರಿ.

ಇದು ಆಪ್ತಮಿತ್ರರಿಗೆ ಬರೆದ ಒಟ್ಟು 166 ಪತ್ರಗಳ ರೂಪದಲ್ಲಿ ಪ್ರಕಟವಾಗಿದೆ. ಒಂದೇ ಒಂದು ಸಾಲಿನ ಪತ್ರದಿಂದ ಹಿಡಿದು (ಪತ್ರ 102, 106, 56) ಅನೇಕ ಪುಟಗಳವರೆಗೆ ಹೋಗುವ ಸುದೀರ್ಘ ಓಲೆಗಳೂ ಇವೆ (ಪತ್ರ. 13 ಇತ್ಯಾದಿ). "ಈ ಕೃತಿಯಲ್ಲಿ ಎರಡು ದೃಷ್ಟಿಯಿಂದ ಉತ್ಕಟತೆ ಹಾಗೂ ವಿವಿಧತೆ ಬಂದಿದೆ. ಅಂದಿನ ಅನುಭವವನ್ನು ಅಂದಿಗೇನೇ ತಟ್ಟನೆ ಅಭಿವ್ಯಕ್ತಗೊಳಿಸಿದಾಗ ನಿರೂಪಿತವಾದ ಭಾವ ಇಲ್ಲವೆ ಅಭಿಪ್ರಾಯದಲ್ಲಿ ಒಂದು ಚಿಗುರುಗೆಂಪು ಇದೆ; ಇದು ಮುಗಿಲಿನಿಂದ ನೆಲಕ್ಕೆ ಬೀಳಲಿರುವ ಮಳೆ ಹನಿಗಳ ಪಾವಿತ್ರ್ಯವಿರುತ್ತದೆ. ಒಂದು ದಿನದ ಅನುಭವ ಇನ್ನೊಂದು ದಿನದಂತೆ ಇರುವುದಿಲ್ಲ. ಸಾಹಿತ್ಯದಿಂದ ರಾಜಕಾರಣ, ಸಂಗೀತದಿಂದ ಇತಿಹಾಸ, ನಾಗರಿಕತೆಯಿಂದ ನಿಸರ್ಗ–ಹೀಗೆ ಸಹಜವಾಗಿಯೇ ವಿಷಯಾಂತರವಾಗುವುದರಿಂದ ಒಂದು ದೃಷ್ಟಿಯಲ್ಲಿಯೇ ಜಗತ್ತಿನ ವೈವಿಧ್ಯ ಮೂಡಿಬರುತ್ತದೆ. ಮೂಡಣದ ಒಂದು ದೃಷ್ಟಿ, ಪಡುವಣದ ಸಮೃದ್ಧ, ಆದರೆ ಸೀಮಿತ ಜೀವನವನ್ನು ನೋಡಿದ ಬಗೆ ಇಲ್ಲಿ ಚಿತ್ರಿತವಾಗಿದೆ" (ಮುನ್ನುಡಿ, ಪುಟ 3).

ಕನ್ನಡದಲ್ಲಿ ಪ್ರವಾಸ ಸಾಹಿತ್ಯ ಸಾಕಷ್ಟು ಬಂದಿದೆ. 'ಸಮುದ್ರದಾಚೆಯಿಂದ' ಕೃತಿ ಲೇಖಕನ ದೃಷ್ಟಿ ಧ್ಯೇಯ ಧೋರಣೆಯನ್ನು ಸಮರ್ಥವಾಗಿ ಸೆರೆಹಿಡಿದಿದೆ. ಈ ಗ್ರಂಥಕ್ಕೆ ಸಾಂಸ್ಕೃತಿಕ ಸಾಹಿತ್ಯಕ ಮಹತ್ವವೂ ಇದೆ. ಲೇಖಕರ ಮನೋಧರ್ಮ ಹೇಗೆ ಮಾಗುತ್ತಾ ವಿಕಾಸ ಪಡೆಯುತ್ತಾ ಆರ್ದ್ರಗೊಳ್ಳುತ್ತಾ ಬೆಳೆದಿದೆಯೆಂಬುದಕ್ಕೆ ಈ ಪುಸ್ತಕ ಕನ್ನಡಿಯೂ ಆಗಿದೆ. ವಿನಾಯಕರ ಗಂಭೀರ

ಹಾಸ್ಯದೃಷ್ಟಿಯೂ ಇದರಲ್ಲಿ ಚೆನ್ನಾಗಿ ಕಂಡುಬರುತ್ತದೆ : "ಇಲ್ಲಿ ಒಬ್ಬ ಭಾರತೀಯ ವಿದ್ಯಾರ್ಥಿಯಿದ್ದಾನೆ. ಹೆಣ್ಣು ಕೊಟ್ಟ ಮಾವನು ಅವನನ್ನು ಕಲಿಯಲಿಕ್ಕೆಂದು ದುಡ್ಡು ಕೊಟ್ಟು ಕಳಿಸಿದ್ದಾನೆ. ಅವನು ಆ ದುಡ್ಡನ್ನು ಇಲ್ಲಿಯ ಹೆಣ್ಣಿಗೆ ಕೊಡುತ್ತಿದ್ದಾನೆ" (ಪುಟ 111). ಹರಿಜನ ಸಮಸ್ಯೆ, ಮತಾಂತರ ಹಿನ್ನೆಲೆ, ಇಸ್ಲಾಂ ಮತ್ತು ಕ್ರಿಶ್ಚಿಯನ್ನರ ಸನ್ನಾಹ-ಈ ಎಲ್ಲ ಪ್ರಯತ್ನಗಳ ಹಿಂದಿರುವ ಉದ್ದೇಶ ಒಂದೇ—ತಮ್ಮ ಮತದ ಅನುಯಾಯಿಗಳ ಸಂಖ್ಯೆ ಹೆಚ್ಚಿಸುವುದು. ಸಂಖ್ಯಾಬಲದ ಸೊಕ್ಕಿಗೆ ಸೊಪ್ಪು ಹಾಕುವ ಪ್ರವೃತ್ತಿಯವರು, ಆಮಿಷಗಳನ್ನೊಡ್ಡಿ ಕಂಗಾಲಾಗಿರುವ ಮುಗ್ಧ ಜನರನ್ನು ಬಲೆಗೆ ಹಾಕಿಕೊಳ್ಳುತ್ತಾರೆ. ಈ ದಾರುಣತೆಯನ್ನು ಪುಟ 171–172ರಲ್ಲಿ ಈ ಪ್ರವಾಸ ಸಾಹಿತಿ ಸೆರೆಹಿಡಿದಿರುವ ಸೊಗಸನ್ನು ಮರೆಯಲಾರೆವು.

ಜೀವನ ಪಾಠಗಳು (ಎರಡನೇ ಮುದ್ರಣ ಜನವರಿ 1961) ಎಂಬುದು ಕೆಲವು ಒಲವಿನ ಓಲೆಗಳೂ ಪ್ರಬಂಧಗಳೂ ಕೂಡಿರುವ ಕೃತಿ: "ಆತ್ಮೋನ್ನತಿ ಹಾಗು ಸಮಾಜೋದ್ಧಾರ ಎಂಬೆರಡು ಸೂತ್ರಗಳನ್ನು ಹಿಡಿದು ಈ ಕೃತಿಗಳು ರಚಿತವಾಗಿವೆ. ಓಲೆಗಳು ಆಕರ್ಷಣೀಯವಾಗಿವೆ. ಪ್ರಬಂಧಗಳೂ ಉಪಯುಕ್ತ ವಿಚಾರಲಹರಿಗಳಿಂದ ತುಂಬಿಕೊಂಡಿವೆ. ಇವು ನಮ್ಮ ನಾಡ ಎಳೆಯರಿಗೂ, ಬೇರೆಯವರಿಗೂ ಜೀವನದಲ್ಲಿ ಪಾಠ ಕಲಿಯಲು ಮಾರ್ಗದರ್ಶಕವಾಗಿವೆ" (ಅರಿಕೆ) ಲೇಖಕರ ಗೆಳೆಯ ವನಮಾಲಿಯು, ಆತನ ಹೆಂಡತಿ ಲಲಿತಳಿಗೆ ಪ್ರೀತಿಯ ನಕಾಶವನ್ನೆಲ್ಲ ತುಂಬಿ ಬರೆದ, ಸುಖ ದಾಂಪತ್ಯದ

ಶಿಕ್ಷಣದ ಬೆಳಕು ಸೂಸುವ, ಸುಸಂಸ್ಕೃತ ಮನೋಧರ್ಮ ವನ್ನು ತಿದ್ದಿ ರೂಪಿಸುವ ಓಲೆಗಳ ಪ್ರಬಂಧಗಳ ಕಟ್ಟು 'ಜೀವನಪಾಠಗಳು'. ತರುಣ ತರುಣಿಯರ ಮುಗ್ಧ ಮನಸ್ಸನ್ನೂ, ಪಕ್ವ ವಯಸ್ಸಿನ ಮಧುರ ಸ್ಮೃತಿಯನ್ನೂ ಈ ಕೃತಿ ಸೆರೆಹಿಡಿಯುತ್ತದೆ. "ಪತ್ನಿಯಿಂದಲೇ ಪತಿಯ ಜೀವನದ ಉದ್ಧಾರವಾಗುವುದು. ಅವಳಿಂದಲೇ ಅವನ ಎಲ್ಲ ಇಚ್ಛೆಗಳು ಪೂರ್ಣವಾಗುವುವು. ಪತ್ನಿಯೆಂದರೆ ಅವನ ಮನೆಯ ಕುಲದೇವತೆ. ಅವನ ಮನೆಯನ್ನು ಸ್ವರ್ಗವನ್ನಾಗಿ ಮಾಡುವವಳು. ಅವಳು ಅವನ ಮನಸ್ಸಿಗೆ ತಕ್ಕಹಾಗೆ ಇಲ್ಲದೆ ಹೋದರೆ ಅವನ ಜನ್ಮವು ನರಕಕ್ಕಿಂತ ಕಡೆ. ಇಲ್ಲಿ ಒಂದು ಕವಿತೆಯು ನೆನಪಾಗು ತ್ತಿದೆ. ಅದು ದೇವರಿಗೆ ಮಾಡಿದ ಒಂದು ಪ್ರಾರ್ಥನೆ. ಅದರಲ್ಲಿ ಈ ಸಾಲಿದೆ. 'ನನಗೆ ದಾಸಿಯು ಬೇಡ ; ಸಹ ಧರ್ಮಿಣಿಯ ನೀಡು. ಹೆಂಡತಿಯೆಂದರೆ ದಾಸಿಯಲ್ಲ. ಮನೆಯಲ್ಲಿ ಎಲ್ಲ ಕೆಲಸವನ್ನು ಮಾಡಲು ಇಟ್ಟ ಕೂಲಿಯ ಆಳಲ್ಲ. ಮನುಷ್ಯನ ವಿಷಯ ವಾಸನೆಯನ್ನು ತೃಪ್ತಿ ಗೊಳಿಸಲು ದೇವರು ಮಾಡಿಟ್ಟ ಗೊಂಬೆಯಲ್ಲ. ಅವಳು ಸಹಧರ್ಮಿಣಿಯು. ಗಂಡನನ್ನು ಕೂಡಿಕೊಂಡು ಧರ್ಮದ ಕಾರ್ಯವನ್ನು ಕೈಕೊಳ್ಳುವವಳು". (ಪುಟ 10).

"ಸಮರಸವೇ ಜೀವನ" ಕನ್ನಡದಲ್ಲಿ ಪ್ರಕಟ ವಾಗಿರುವ ಸಾಮಾಜಿಕ ಕಾದಂಬರಿಗಳಲ್ಲಿ ಬೃಹತ್ ಕಾದಂಬರಿ. ಮೊದಲು ಈ ಕಾದಂಬರಿ ಅಚ್ಚಾದದ್ದು ಆರು ಭಾಗಗಳಲ್ಲಿ: ಇಜ್ಜೋಡು, ಅಂತಃ ಸತ್ವ, ಪ್ರೀತಿಯ ಯೋಗಮಾಯೆ ಪರಿಳಿತ, ಸಮುದ್ರಯಾನ

ಮತ್ತು ನಿರ್ವಹಣ. ಇಂಗ್ಲಿಷಿನಲ್ಲಿ ಬರೆದ 'ನರಹರಿ–ನವಯುಗ ಪ್ರವರ್ತಕ' ಎಂಬುದೂ ಈ ಮಾಲೆಗೆ ಸೇರಿದ ಕೊನೆಯ ಕಂತು. ಈ ದೊಡ್ಡ ಕಾದಂಬರಿಯ ಸಂವಿಧಾನ ವ್ಯವಸ್ಥೆಯಲ್ಲಿ 'ಭಾಗ'ಗಳ ಸಮಾವೇಶವನ್ನು ಕುರಿತು ಸ್ವಲ್ಪ ಹೆಚ್ಚು ಕಡಮೆ ಮಾಡಲಾಗಿದೆ. ಪುನ ರ್ಯೋಜಿತ ಅಯ್ದು ಭಾಗಗಳು: ಇಜ್ಜೋಡು, ಏರಿಳಿತ, ಸಮುದ್ರಯಾನ, ನಿರ್ವಹಣ ಮತ್ತು ನರಹರಿ. ರಚನೆಯ ಔಚಿತ್ಯ ಹಾಗೂ ಪುನರ್ಯೋಜಿಸಿದ ಉದ್ದೇಶ ಗಳನ್ನು ನಾಲ್ಕನೆಯ ಮುದ್ರಣಕ್ಕೆ ಬರೆದ ಮುನ್ನುಡಿ ಯಲ್ಲಿ ಹೀಗೆ ಹೇಳಿದ್ದಾರೆ ; "ಹುಟ್ಟಿದ ಮನೆಯನ್ನು ಬಿಟ್ಟು ಹೊರಬೀಳುವವರೆಗೆ ಮೊದಲನೆಯ ಭಾಗ ನರಹರಿಯ ಬೆಳವಣಿಗೆಯನ್ನು ಕುರಿತು ರಚಿತವಾಗಿದೆ ಯೆನ್ನಬಹುದು. ಎರಡನೆಯ ಭಾಗ ನರಹರಿ–ಛಿಷ್ಟು–ಸೀನೂರ ಜೀವನವನ್ನು ಪುಣೆಯಿಂದ ವಿಲಾಯಿತಿಗೆ ಇಬ್ಬರು ಸ್ನೇಹಿತರು ಹೊರಡುವ ಕಾಲಾವಧಿಯ ತನಕ ಚಿತ್ರಿಸುತ್ತದೆ. ಮೂರನೆಯ ಭಾಗದಲ್ಲಿ ನರಹರಿಯು ದೇಶದ ಕರೆ ಕೇಳಿ ಸೆರೆಮನೆಯಲ್ಲಿದ್ದ ಅವಧಿ ಹಾಗು ಅವನ ಸ್ನೇಹಿತರು ಇಂಗ್ಲೆಂಡಿನಲ್ಲಿದ್ದ ಕಾಲಾವಧಿಯ ಜೀವನ ಚಿತ್ರಿತವಾಗಿದೆ. ನಾಲ್ಕನೆಯ ಭಾಗದಲ್ಲಿ ಮೂವರು ಸ್ನೇಹಿತರ ಜೀವನದೊಳಗಿನ ವಿಷ–ಅಮೃತ ವನ್ನು ವರ್ಣಿಸಿ ನರಹರಿಯು ಪೂರ್ಣಜೀವನ ಕೇಂದ್ರ ವನ್ನು ಸ್ಥಾಪಿಸಬೇಕೆಂಬ ಯೋಚನೆ ಪ್ರಸ್ಥಾಪಿತವಾಗಿದೆ. ಐದನೆಯ ಭಾಗದಲ್ಲಿ ನರಹರಿಯು ಪೂರ್ಣಜೀವನ ಕೇಂದ್ರದ ವಿಚಾರ, ಅಲ್ಲಿ ಉಳಿದಿಬ್ಬರು ಸ್ನೇಹಿತರು ಸಮಾವಿಷ್ಟರಾದ ಬಗೆ, ನರಹರಿಯ ವಿಕಸನದ ರೀತಿ ;

ಇವೆಲ್ಲ ಬಂದಿವೆ'' (ಸಮುದ್ರಯಾನ, ಮುನ್ನುಡಿ, ಪುಟ 5, 1980).

ಈ ಕೃತಿ ತಮಗೆ ಹೆಮ್ಮೆ–ತೃಪ್ತಿ ತಂದುಕೊಟ್ಟಿದೆಯೆಂದು ಕಾದಂಬರಿಕಾರರು ಬಿನ್ನವಿಸಿಕೊಂಡಿದ್ದಾರೆ. ಇಷ್ಟು ವಿಸ್ತಾರವಾದ ಗ್ರಂಥ ಬರೆಯುವುದು ಸಾಧನೆ ಹಾಗೂ ಸಮಾಧಾನವ ಸಂಗತಿಯೆಂದೂ, ಅವರು ಗಳಿಸುತ್ತಿರುವ ಪೂರ್ಣದೃಷ್ಟಿಯ ಝಳಕು ಇದರಲ್ಲಿ ಮೂಡಿದೆಯೆಂದು ಲೇಖಕರ ಭಾವನೆಯಾಗಿದೆ. ಇದರ ಬಗೆಗೆ ಅಭಿಪ್ರಾಯಭೇದಗಳು ಹೊರಬಿದ್ದಿರುವುದನ್ನು ಅವರೂ ಬಲ್ಲರು. ''ನರಹರಿ ಭಾಗದಲ್ಲಿ ಬಂದಿರುವ ವೇದಾಂತೀಕರಣವನ್ನು, ಇಜ್ಜೋಡಿ''ನಲ್ಲಿ ಕನಸುಣಿಯ ಮನರಂಜನೆಯನ್ನು–ಹೀಗೆ ಒಟ್ಟಾರೆ ಕಾದಂಬರಿಯ ಪೂರ್ಣದೃಷ್ಟಿ ಅನುಭಾವಪ್ರಿಯತೆ, ಅತಿಲಂಬಿತತೆಯಿಂದ ಉಂಟಾಗಿರುವ ಶೈಥಿಲ್ಯ, ಕೆಲವೆಡೆ ಆತುರದ ಓಟ–ಹೀಗೆ ಒಟ್ಟು ಸಂವಿಧಾನದ ಬಿರುಕುಗಳನ್ನು ತೋರಿಸುವ ಪ್ರಯತ್ನಗಳಾಗಿವೆ. ಈ ನ್ಯೂನತೆಗಳಿಗೆ ಕಾದಂಬರಿಕಾರರ ಪ್ರತಿಕ್ರಿಯೆ ಹೀಗಿದೆ ; ''ಸಮರಸವೇ ಜೀವನದ ಬಗ್ಗೆ ಅಪಪ್ರಚಾರವಾಗದೆಯೂ ಇಲ್ಲ. ಇದರ ಜೊತೆಗೆ ನಿಲ್ಲುವ ಕಾದಂಬರಿಗಳನ್ನು ಉಲ್ಲೇಖಿಸಿ ಇದನ್ನು ಬೇಕೆಂತಲೇ ಕನ್ನಡ ಕಾದಂಬರಿಗಳನ್ನು ಕುರಿತು ಬರೆದ ಲೇಖನಗಳಲ್ಲಿ ವಿಮರ್ಶಕರು ಬಿಟ್ಟಿರುವುದೂ ಉಂಟು. ಮೌನವಾಗಿಯೆ ಆಗಲಿ, ಇಲ್ಲವೆ ಲಘುವಾಗಿಯೆ ಆಗಲಿ ಈ ಕೃತಿಯನ್ನು ಅನೇಕರು ಕೈಬಿಟ್ಟಿದ್ದಾರೆ. ಕಾರಣಗಳು ವೈಯಕ್ತಿಕವಿರಬಹುದು ಇಲ್ಲವೆ ಒಂದು ಪಂಥದವಿರಬಹುದು. ಸಾರೆತ್ರ, ಲೋಹಿಯಾ ಅವರ ಜೀವನ

ದೃಷ್ಟಿಯ ಬಗ್ಗೆ ಮಾತಾಡಬಹುದು, ಮಾತಾಡಬೇಕು ; ಆದರೆ ರಾಮಕೃಷ್ಣ–ಅರವಿಂದರಂಥವರ ದೃಷ್ಟಿಯನ್ನು "ಜೀವನದೃಷ್ಟಿ"ಯೆಂದು ಕರೆಯುವುದೂ ಸಾಧ್ಯವಿಲ್ಲವೆಂದು ಕೆಲವರ ಅಭಿಪ್ರಾಯವಾಗಿದೆ. ಇನ್ನೂ ಕೆಲವರು ದೊಡ್ಡವರ ಗೋಜಿಗೆ ಹೋಗದಿದ್ದರೂ ಉಳಿದವರದೆಲ್ಲ Pseudomysticism ಎಂದು ಸುರುಳಿ ಸುತ್ತಿಡುವುದುಂಟು. ಇಂಥವರಿಗೆ ಅನುಭಾವದಲ್ಲಿ ಮಿಡಿಯುತ್ತಿರುವ ಜೀವಂತಿಕೆಯ ಅರಿವು ಸಹ ಇರುವುದಿಲ್ಲ...ಸಾವು ಮುಂದೆ ಹಾಕಬೇಕೆಂದರೆ ನಿಲ್ಲುವುದಿಲ್ಲ. ಬೇಡವೆಂದರೆ ಬಿಡುವುದಿಲ್ಲ.. ಬೇಕೆಂದರೆ ಬರುವುದಿಲ್ಲ. ನಾವಿರಲಿ ಬಿಡಲಿ, ಬೆಲೆ ಕಟ್ಟುವ ಕಾಲ ತನ್ನ ಸಮಯಕ್ಕೆ ಬಂದೇ ಬರುತ್ತದೆ. ನಮ್ಮ ಇಲ್ಲವೆ ಪರರ ಇಚ್ಛೆಯನ್ನು ಅದು ಅವಲಂಬಿಸಿರುವುದಿಲ್ಲ, ಆ ನಿರ್ಣಯವೇನೆಂಬುದನ್ನು ನಿರ್ವಿಕಾರವಾದ ಪ್ರಜ್ಞೆ ಹಾಗು ಅಭಿರುಚಿ ಮೊದಲಿಗೂ ತಿಳಿಯಬಲ್ಲದು. ಅಂತೇ ಅನೇಕ ಸಾಹಿತಿಗಳು ಇಂತಹ ಪ್ರಜ್ಞೆಯಲ್ಲಿ ಶ್ರದ್ಧೆಯಿಟ್ಟು ಕಾರ್ಯ ಪ್ರವೃತ್ತರಾಗುವದು ಸಾಧ್ಯವಾಗುತ್ತದೆ". (ಅದೇ,ಪುಟ 6–7). ಕಾದಂಬರಿಕಾರರ ಭಿತ್ತಿ ವಿಶಾಲವಾಗಿದೆ. ಅದರಮೇಲೆ ಕೆತ್ತಿರುವ ಚಿತ್ರ ಸಾಧಾರಣವಾದುದು, ಬಿಡಿಸಿರುವ ಪಾತ್ರ ಸಾಮಾನ್ಯವಾದುದು, ಬಂಧ ಸಡಿಲವಾದುದು.

ವಿಶ್ವ ಮಾನದ ದೃಷ್ಟಿ (1971) ಆರು ಬಿಡಿ ಬರಹಗಳ ಗುಚ್ಛ. ಇದರಲ್ಲಿ ಮೊದಲನೆಯದು ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣ–ವಿಶ್ವಮಾನವನಾಗಬೇಕಾದ ಕನ್ನಡಿಗ. ಇದಕ್ಕೆ ಪೋಷಕವೆಂಬಂತೆ ಕರ್ನಾಟಕ ಸರ್ವಜ್ಞ : ಜನತೆಯ ಕವಿ, ವಿಶ್ವ ಮಾನವ

ಬಸವೇಶ್ವರ, ರವೀಂದ್ರರ ಕಾವ್ಯ ಕಲ್ಪನೆ ಹಾಗು ತತ್ತ್ವ ದರ್ಶನ, ಶ್ರೀ ಅರವಿಂದರ ಕಾವ್ಯ ದೃಷ್ಟಿ, ಬಾಳೆ ಕುಂದ್ರಿಯ ಶ್ರೀ ಪಾತರು ಎಂಬ ಆಯ್ದು ಲೇಖನ ಗಳಿವೆ. ವಿನಾಯಕರ ಇತರ ಕಾವ್ಯಗಳಲ್ಲಿ ಹಾಸು ಹೊಕ್ಕಾಗಿ, ಅಂತರ-ಗಂಗೆಯಾಗಿ ಬರುವ ಅರವಿಂದರ ವಿಚಾರ ಧಾರೆಯ ಅರ್ಥಗ್ರಹಿಕೆಗೆ ಈ ಪುಸ್ತಕದಲ್ಲಿರುವ 'ಶ್ರೀ ಅರವಿಂದರ ಕಾವ್ಯ ದೃಷ್ಟಿ' ಎಂಬ ಲೇಖನ ವಿಶೇಷವಾಗಿ ಸಹಾಯಕವಾಗಿದೆ.

ಸೌಂದರ್ಯ ಮೀಮಾಂಸೆ (1973) ಕರ್ನಾಟಕ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನೀಡಿದ ವಿಶೇಷ ಉಪನ್ಯಾಸ. ಇದರಲ್ಲಿ ಕಲಾ ಸ್ವರೂಪ, ಧ್ವನಿ ಹಾಗು ಪ್ರತಿಧ್ವನಿ, ರಸವೋ ಜೀವನ ದೃಷ್ಟಿಯೋ ಎಂಬ ಮೂರು ಎಸಳುಗಳಿವೆ. ಭಾರತೀಯ ಲಾಕ್ಷಣಿಕರು, ಅರವಿಂದರು ಪ್ರತಿಪಾದಿಸಿರುವ ಕಲಾ ಕೃತಿಯ ವಿವೇಚನೆ, ಪಾಶ್ಚಾತ್ಯ ವಿಮರ್ಶೆಯ ಬೆಳಕಿನಲ್ಲಿ ಧ್ವನಿ ಸಿದ್ಧಾಂತದ ಮರು ಪರಿಶೀಲನೆ, ಸ್ಥಾಯಿ ಹಾಗು ಸಂಚಾರಿ ಭಾವಗಳು ಮತ್ತು ರಸಸಿದ್ಧಾಂತದ ಪರಾಮರ್ಶೆ—ಇದು 60 ಪುಟಗಳ ಈ ಪುಸ್ತಕದ ಮುಖ್ಯ ಉದ್ದೇಶ. ನಮ್ಮ ಪರಂಪರೆಯ, ಆಲಂಕಾರಿಕರ ನಿರೂಪಣೆಗೆ ಸಂವಾದಿಯಾದ ಇಲ್ಲವೆ ಭಿನ್ನವಾಗುವ ಮಾತುಗಳನ್ನು ಉಲ್ಲೇಖಿಸಿ ಲೇಖಕರು ತಮ್ಮ ಅನಿಸಿಕೆಗಳನ್ನು ವಿವರಿಸಿದ್ದಾರೆ. ಇದಕ್ಕೆ ಪೂರಕವಾದ ಲೇಖನ-ಪುಸ್ತಕಗಳನ್ನು ಗೋಕಾಕರು ಇಂಗ್ಲಿಷಿನಲ್ಲೂ ಬರೆದಿದ್ದಾರೆ: The poetic Approach to Language, Sri Aurobindo: seer and poet, Coleridge's Aesthetics, Poetry and Vision.

ಸಾಹಿತ್ಯ ವಿಮರ್ಶೆಯ ವಿದ್ಯಾರ್ಥಿಗೆ ಇದು ಸಹಾಯಕ ಗ್ರಂಥವಾಗಿದೆ.

'ಕವಿ, ಕಾವ್ಯ, ಮಹೋನ್ನತಿ' (ಜುಲೈ, 1935) 1934 ರಲ್ಲಿ ರಾಯಚೂರಿನಲ್ಲಿ ಜರುಗಿದ ಗದ್ಯ ಪದ್ಯ ಲೇಖಕರ ಗೋಷ್ಠಿಗೆ ಅಧ್ಯಕ್ಷರಾಗುವ ಪ್ರಸಂಗ ಬಂದಾಗ ಕೊಟ್ಟ ಭಾಷಣ, ಜುಲೈ 1935ರಲ್ಲಿ ಅಚ್ಚಾಗಿದೆ. ಭಾಷಣದ ಧಾಟಿಯಲ್ಲಿರುವ 56 ಪುಟಗಳ ಈ ಬರವಣಿಗೆಯಲ್ಲಿ ಕವಿ ಸಮ್ಮೇಲನ, ಗದ್ಯ ಪದ್ಯಗಳ ಸಂಬಂಧ ಐತಿಹಾಸಿಕ ತುಲನೆ, ಕಾವ್ಯಕ್ಕೆ ಛಂದಸ್ಸು ಅವಶ್ಯವೇ, ಗದ್ಯ-ಪದ್ಯಗಳ ಸಾಮ್ಯ-ವೈಷಮ್ಯಗಳು, ಪದ್ಯಾತ್ಮಕ ಪದ್ಯ, ಗದ್ಯದ ವೈಶಿಷ್ಟ್ಯ ಕುರಿತು ವಿಚಾರಗಳಿವೆ. ವಿಷಯ ಪ್ರತಿಪಾದನೆಗೆ ಲೇಖಕರು ಸಿಮನ್ಸನ್ ಹೇಳಿಕೆಗಳನ್ನು ವಿಶೇಷವಾಗಿ ಉದಾಹರಿಸುತ್ತಾರೆ ; ಕೋಲಿರಿಜ್, ಮಿಡಲ್ಟನ್ ಮರೆ, ಕ್ವಿಲರ್ ಕೂಚ್ ವಿಂಚೆಸ್ಟರ್, ಹಂಬರ್ಟ್‌ವೂಲ್ಫ್, ಎಬರ್‌ಕ್ರೊಂಬಿ ಮೊದಲಾದವರ ಅಭಿಪ್ರಾಯಗಳೂ ವಿಷಯ ಪುಷ್ಟಿಗೆ ಉದಾಹೃತಗೊಂಡಿವೆ. ಇಲ್ಲಿನ ಕೆಲವು ಹೇಳಿಕೆಗಳು ಅತ್ಯುತ್ಸಾಹದ ಆವೇಶದ ಆದರ್ಶದ ಗಿಳಿ ಪಾಠಗಳು. ಸ್ವಂತಕ್ಕಿಂತ ಕಡತಂದ ಎರವಲು ವಿಚಾರದ ಸರಪಳಿಯನ್ನು ತೋರಿಸಿ ಖುಷಿಪಡುವ ಪ್ರದರ್ಶನಕಾರನನ್ನು ನೆನಪಿಗೆ ತರುವ ಬರವಣಿಗೆ. ನಾನು ಪರಿಷತ್ತಿನ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಆರಂಭದ ಮೂರು ವರ್ಷಗಳಲ್ಲಿ ಗ್ರಂಥ ಪ್ರಕಟನ ಸಮಿತಿಯ ಪ್ರಧಾನ ಸಂಪಾದಕರಾಗಿ ಸಹಕಾರ ಮತ್ತು ಮಾರ್ಗದರ್ಶನ ನೀಡಿದವರು ವಿನಾಯಕರು. ಅವರ ಮುಂದಾಳುತನದಲ್ಲಿ ಹೊರಬಂದ ಗ್ರಂಥಗಳು : ಭಿಕ್ಷಾ

ಟನ ಚರಿತೆ, ಶಾಂತಿ ಪುರಾಣ, ನೇಮಿನಾಥ ಪುರಾಣ, ಚೆನ್ನಬಸವಪುರಾಣ–ಇತ್ಯಾದಿ.

ವಿನಾಯಕರು ಕಳೆದ ಅರ್ಧಶತಮಾನ ಕಾಲ ಕನ್ನಡದಲ್ಲಿ, ಇಂಗ್ಲಿಷಿನಲ್ಲಿ ಬರವಣಿಗೆ ಮಾಡಿದ್ದಾರೆ. ವಿಸ್ತಾರವಾಗಿರುವ ಅವರ ಇಂಗ್ಲಿಷ್ ಬರಹವನ್ನು ಪರಿಚಯಿಸುವುದು ಈ ಪುಟ್ಟ ಪುಸ್ತಕದ ಅಳವಿಗೆ ಮೀರಿದ್ದು. ಹಾಗೆ ನೋಡುವುದಾದರೆ ಇಲ್ಲಿ ಕನ್ನಡದಲ್ಲಿರುವ ಅವರ ಎಲ್ಲ ಕೃತಿಗಳನ್ನೂ ಸಮಗ್ರವಾಗಿ, ಸಮರ್ಪಕವಾಗಿ ಪರಿಚಯಿಸಲು ಸಾಧ್ಯವಾಗಿಲ್ಲ. ಅಂತೂ ಅಂಥದೊಂದು ಪ್ರಯತ್ನ ಇಲ್ಲಿದೆ. ವಿನಾಯಕರ ಜೀವನವನ್ನೂ, ಆ ಜೀವನದ ಸಾಧನೆಯ ಶಿಖರಗಳನ್ನು ತೋರಿಸಲಾಗಿದೆ.

'ಶ್ರೀ'ಯವರ ತರುವಾಯ, ಅವರಿಗಿಂತ ಸಮರ್ಥ ರೀತಿಯಿಂದ, ಕನ್ನಡ ಸಾಹಿತ್ಯದ ಕ್ಷಿತಿಜವನ್ನು ವಿಸ್ತರಿಸಿದ ಇಂಗ್ಲಿಷ್ ಪ್ರಾಧ್ಯಾಪಕರಲ್ಲಿ ವಿನಾಯಕರು ಅಗ್ರಗಣ್ಯರು. ನವೋದಯ–ನವ್ಯ ಹಾಗೂ ನವ್ಯೋತ್ತರ ಎಂಬ ಸಾಹಿತ್ಯ ಚರ್ಚೆ ನಡೆಯುತ್ತಲೇ ಇದೆ, ಆ ಚರ್ಚೆ ಇನ್ನೂ ಕೆಲವು ಕಾಲ ನಡೆಯುತ್ತಿರುತ್ತದೆ. ಆದರೆ ಇಷ್ಟು ನಿಜ, ಬೇಂದ್ರೆ–ಕುವೆಂಪು ತರುವಾಯದ ಸಾಹಿತಿಗಳ ಸಾಲಿನಲ್ಲಿ ಪುತಿನ–ವಿನಾಯಕ ನಿಲ್ಲುತ್ತಾರೆ. ವಿನಾಯಕರಿಗೂ ಮಿತಿಗಳಿವೆ ; ಅತಿ ಪ್ರಾಸ ಪ್ರಿಯತೆ, ವಾಚಾಳಿತನ, ಅತಿ ವಾಚ್ಯವಾಗುವಿಕೆ, ಕವಿತೆ ಹಿಂದೆ ಬಿದ್ದು ಗದ್ಯವಾಗುವಿಕೆ, ಸಂಕ್ಷಿಪ್ತತೆ–ಸಂಕೀರ್ಣತೆಗಿಂತ ವಿಸ್ತಾರದತ್ತ ಒಲವು. ಆದರೆ ಈ ಬಗೆಯ ದೋಷಗಳನ್ನು ಜೀರ್ಣಿಸಿಕೊಂಡು ಭವ್ಯವಾಗಿ ಬೆಳೆದುನಿಂತಿರುವ ಅವರ ಸಾಹಿತ್ಯ

ಗೌರವದ ಗೌರಿಶಂಕರವಾಗಿದೆ. ಅಲ್ಲದೆ ಮಿತಿಗಳೂ ಇರಬೇಕು. ಮಿತಿಗಳೇ ಇಲ್ಲದ ಲೇಖಕರು ಯಾರು ? ಎಲ್ಲಿದ್ದಾರೆ ? ಮಿತಿಗಳಿದ್ದೂ ದೊಡ್ಡವರಾದ ಲೇಖಕ ರಿದ್ದಾರೆ. ವಿನಾಯಕರು ಅಂತಹ ಹಿರಿಯ ಲೇಖಕರಲ್ಲಿ ಒಬ್ಬರು. ಕನ್ನಡ–ಕರ್ನಾಟಕ ಅವರ ಮೂಲಕ ರಾಷ್ಟ್ರ ವೇದಿಕೆಯೇರಿದೆ. ಶ್ರೀಯುವರು ಕರ್ನಾಟಕಕ್ಕೆ ಸೀಮಿತ ರಾದರು ; ಅವರ ಭೂಮಿ ಭೂಮಿಕೆ ಬರವಣಿಗೆ ಬಹಳ ಸೀಮಿತವಾಗಿತ್ತು. ಆದರೆ ವಿನಾಯಕರು ಸಂಕುಚಿತ ಸೀಮಾರೇಖೆಗಳನ್ನು ತಮ್ಮ ಘನ ಸರ್ವಂಕಷ, ಸಾಕಲ್ಯ ವ್ಯಕ್ತಿತ್ವದಿಂದ ಸೀಮೋಲ್ಲಂಘನ ಮಾಡಿ ಸೀಮಾಪುರುಷ ರಾದರು, ರಾಷ್ಟ್ರಕವಿಯಾದರು. ಅವರ ಬರವಣಿಗೆಯ ವಿಪುಲತೆ, ವಿವಿಧತೆ, ಸತ್ವ ಯಾವುದೇ ಲೇಖಕನಿಗೆ ಸಮಾಧಾನ ಗೌರವ ತಂದುಕೊಡುತ್ತದೆ.

ವಿನಾಯಕರು ಕನ್ನಡಿಗರು, ಕನ್ನಡದಲ್ಲಿ ಬರೆದರು ಎಂಬುದು ನಮಗೆ ಹೆಮ್ಮೆಯ ವಿಷಯ.

ವಿನಾಯಕರ ಹೆಜ್ಜೆಗಳು :

1909 ಜನನ (ಆಗಸ್ಟ್ 10) ಸವಣೂರು

1920 ಬಿ.ಎ. ಪದವಿ

1930 ವಿವಾಹ

1931 ಎಂ. ಎ. ಪದವಿ ; ಅಧ್ಯಾಪಕ ವೃತ್ತಿಯ ಆರಂಭ

1934 ರಾಯಚೂರು ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಅಧ್ಯಕ್ಷರು

1936 ಉನ್ನತ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ

1940 ಸಾಂಗ್ಲಿ ವಿಲಿಂಗ್‌ಡನ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ; 'ಸಮುದ್ರ ಗೀತಗಳು' ಪ್ರಕಟಣೆ

1945 ಉಸ್ಮಾನಿಯಾ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರು

1946 ವೀಸನಗರ ಕಾಲೇಜಿನಲ್ಲಿ ಪ್ರಿನ್ಸಿಪಾಲರು

1949 ಕೊಲ್ಲಾಪುರ ರಾಜಾರಾಂ ಕಾಲೇಜಿನಲ್ಲಿ ಪ್ರಿನ್ಸಿಪಾಲರು

1950 ಮುಂಬೈ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಅಧ್ಯಕ್ಷರು

1952 ಧಾರವಾಡ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರು

1957 ಪಿ.ಇ.ಎನ್. ಅಧಿವೇಶನದಲ್ಲಿ ಭಾಗವಹಿಸಲು ಜಪಾನಿಗೆ ಭೇಟಿ

1958 ಬಳ್ಳಾರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು
ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಭೇಟಿ

1959 ಅಂತರರಾಷ್ಟ್ರೀಯ ಕವಿಮೇಳದಲ್ಲಿ ಭಾಗವಹಿಸಲು ಬೆಲ್ಜಿಯಂಗೆ ಭೇಟಿ ಹೈದರಾಬಾದಿನ ಸೆಂಟ್ರಲ್ ಇನ್‌ಸ್ಟಿ-ಟ್ಯೂಟ್ ಆಫ್ ಇಂಗ್ಲಿಷಿನ ಸಂಸ್ಥಾಪಕ ನಿರ್ದೇಶಕರು

1960 ‘ದ್ಯಾವಾಪೃಥಿವೀ’ ಕೃತಿಗಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಚರಾರಚ ಪೂರ್ವ ಆಫ್ರಿಕಾಕ್ಕೆ ಭೇಟಿ.
‘ಪದ್ಮಶ್ರಿ’ ಪ್ರಶಸ್ತಿ
ಅಖಿಲಭಾರತ ಇಂಗ್ಲಿಷ್ ಅಧ್ಯಾಪಕರ ಸಮ್ಮೇಳನದ ಅಧ್ಯಕ್ಷರು

1962 ಇಂಗ್ಲೆಂಡಿಗೆ ಭೇಟಿ

1965 ಮತ್ತೆ ಇಂಗ್ಲೆಂಡಿಗೆ ಭೇಟಿ

1966 ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ

1967 ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ

1969 ಕರ್ನಾಟಕದಾದ್ಯಂತ ಷಷ್ಟಿಪೂರ್ತಿ ಸಮಾರಂಭಗಳ ಆಚರಣೆ ಪ್ರಶಸ್ತಿ ಗ್ರಂಥಗಳ ಪ್ರಕಟಣೆ
ನಾಗಪುರ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣ

1970 ಸಿಮ್ಲಾದ ಇಂರಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ನಿರ್ದೇಶಕರು

1971 ಕ್ಯಾಲಿಫೋರ್ನಿಯಾದ ಪೆಸಿಫಿಕ್ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ

1972 ಸರ್ದಾರ್ ಪಟೇಲ್ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣ

1974 ಕಲ್ಕತ್ತಾ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣ

1975 ಶಿವಾಜಿ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣ

1977 ಭಾರತೀಯ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಮಂಡಳಿ ಅಧ್ಯಕ್ಷರು

1978 ಕೇಂದ್ರ ಸಾಹಿತ್ಯ ಅಕಾಡೆಮಿ ಉಪಾಧ್ಯಾಕ್ಷರು

1980 ಭಾಷಾಸಮಿತಿ ಅಧ್ಯಕ್ಷರು (ಗೋಕಾಕ್ ವರದಿ)

1981 ಸತ್ಯಸಾಯಿ ಸ್ವೀಕೃತ ವಿಶ್ವವಿದ್ಯಾಲಯದ ಕುಲಪತಿ

1982 ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು

ವಿನಾಯಕರ ಕೃತಿಗಳು :

ಅಪರ್ಣದೃಷ್ಟಿ (ಉ)
ಅಭ್ಯುದಯ (ಕಾ)
ಆಂಗ್ಲಸಾಹಿತ್ಯ ನೀಡಿದ ಸ್ಫೂರ್ತಿ (ಉ)
ಇಂದಲ್ಲ ನಾಳೆ (ಕಾ)
ಉಗಮ (ಕಾ)
ಊರ್ಣನಾಭ (ಕಾ)
ಋಗ್ವೇದದಲ್ಲಿ ಕ್ರಾಂತದೃಷ್ಟಿ (ಉ)
ಇಂದಿನ ಕನ್ನಡ ಕಾವ್ಯದ ಗೊತ್ತುಗುರಿಗಳು (ವಿ)
ಕಲೆಯ ನೆಲೆ (ಉ)
ಕಲೋಪಾಸಕ (ಕಾ)
ಕವನಗಳಲ್ಲಿ ಸಂಕೀರ್ಣತೆ (ಉ)
ಕವಿಕಾವ್ಯ ಮಹೋನ್ನತಿ ಉ)
ಕಾಶ್ಮೀರ (ಕಾ)
ಕೊನೆಯ ದಿನ (ಕಾ)
ಚಿಂತನ (ಕಾ)
ಚೆಲುವಿನ ನಿಲುವು (ಪ್ರ)
ಜನನಾಯಕ (ನಾ)
ಜೀವನ ಪಾಠಗಳು (ಪ್ರ)
ತ್ರಿವಿಕ್ರಮರ ಆಕಾಶಗಂಗೆ (ಕಾ)
ತ್ರಿಶಂಕುವಿನ ಪ್ರಜ್ಞಾಪ್ರಭಾತ (ಕಾ)
ದ್ಯಾವಾ ಪೃಥಿವೀ (ಕಾ)
ನವ್ಯ ಕವಿತೆಗಳು (ಕಾ)
ನವ್ಯತೆ (ವಿ)
ನವ್ಯತೆ ಹಾಗೂ ಕಾವ್ಯಜೀವನ (ವಿ)
ಪಯಣ (ಕಾ)

ಪಾರಿಜಾತದಡಿಯಲಿ (ಕಾ)
ಪುಣ್ಯಭೂಮಿ (ಕಾ)
ಬಾಳದೇಗುಲದಲ್ಲಿ (ಕಾ)
ಭಾಗವತ ನಿಮಿಷಗಳು (ವ ಚಿ)
ಭಾರತ ಸಿಂಧುರಶ್ಮಿ (ಕಾ)
ಭಾವರಾಗ (ಕಾ)
ಮುನಿದ ಮಾರಿ (ನಾ)
ಯುಗಾಂತರ (ನಾ)
ವಿಮರ್ಶಕ ವೈದ್ಯ (ನಾ)
ವಿಶ್ವಮಾನವ ದೃಷ್ಟಿ (ವಿ)
ಸಮುದ್ರದಾಚೆಯಿಂದ (ಪ್ರ ಸಾ)
ಸಮುದ್ರ ಗೀತಗಳು (ಕಾ)
ಸಮುದ್ರದೀಚೆಯಿಂದ (ಪ್ರ ಸಾ)
ಸಮರಸವೇ ಜೀವನ (ಕಾದಂ)
ಸೌಂದರ್ಯ ಮೀಮಾಂಸೆ (ಉ)
ಸಾಹಿತ್ಯದಲ್ಲಿ ಪ್ರಗತಿ (ವಿ)
ಸಿಮ್ಲಾ ಸಿಂಫನಿ (ಕಾ)
ಹಿಗ್ಗು (ಕಾ)

ಸಂಕೇತಗಳು :

ಉ - ಉಪನ್ಯಾಸ, ಕಾ - ಕಾವ್ಯ, ನಾ - ನಾಟಕ,
ಪ್ರ - ಪ್ರಬಂಧ, ಪ್ರಸಾ - ಪ್ರವಾಸ ಸಾಹಿತ್ಯ,
ವ ಚಿ - ವಚನ ಚಿತ್ರ, ಕಾದಂ - ಕಾದಂಬರಿ, ವಿ - ವಿಮರ್ಶೆ.

ಪ್ರಚಾರೋಪನ್ಯಾಸ ಮಾಲೆಯ ಕೆಲವು ಹೊತ್ತಿಗೆಗಳು

ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
ಹವಾನುಕೂಲನ ಮತ್ತು ಪ್ರಶೀತನ	ಕೆ. ವಿ. ಸುಬ್ಬರಾಯ
ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
ಚಂದ್ರಲೋಕ ಯಾತ್ರೆ	ಪಿ. ಎಸ್. ವೆಂಕಟಸ್ವಾಮಿ
ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
ಅಂತರ್ಜಲ	ಸಿ. ನಾಗಣ್ಣ
ಮಾನವ ನಿರ್ಮಿತ ಧಾತುಗಳು	ಎಸ್. ವೆಂಕಟೇಶಮೂರ್ತಿ
ಕರ್ನಾಟಕ ಅಂತರ್ಜಲ ಸಂಪನ್ಮೂಲಾಭಿವೃದ್ಧಿ	ವೈ. ಲಿಂಗರಾಜು
ಮಾನವನ ಮೇಲೆ ಗ್ರಹಗಳ ಪ್ರಭಾವ ಉಂಟೆ?	ಎನ್. ಕೆ. ನರಸಿಂಹಮೂರ್ತಿ
ಅನುವಂಶೀಯತೆ ಮತ್ತು ವೈವಿಧ್ಯ	ಎಂ. ಎಸ್. ಎಸ್. ರಾವ್
ದ್ಯುತಿ ವಿದ್ಯುತ್ ಪರಿಣಾಮ	ಕೆ. ನಾಗರಾಜನ್
ಮಾನವ ಮತ್ತು ಪಾಚಿಗಳು	ವಿ. ಎಸ್. ಯಲವಿಗಿ
ಕಪ್ಪು ರಂಧ್ರಗಳು	ವಿ. ಟಿ. ಎಸ್. ಶರ್ಮ